6. ನಿಯಮ 69ರ ಮೇರೆಗೆ

ವಿಷಯ: ರಾಜ್ಯದಲ್ಲಿ ತೆಂಗಿನ ಮರಗಳಿಂದ ನೀರಾ ಇಳಿಸಲು ಅನುಮತಿ ನೀಡುವ ಬಗ್ಗೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್(ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೆ, ನಿನ್ನೆ ಅರ್ಧ ಚರ್ಚೆ ಆಗಿ ಅಪೂರ್ಣ ಆದ ನೀರಾ ಇಳಿಸುವುದರ ಬಗ್ಗೆ ನಿಯಮ 69ರ ಅಡಿಯಲ್ಲಿ ತಾವು ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ತಮಗೆ ವಂದಿಸುತ್ತಾ, ತೆಂಗಿನ ಬೆಳೆ ರಾಜ್ಯದಲ್ಲಿ ಒಂದು ಪ್ರಮುಖವಾದ ವರಮಾನ ಬರತಕ್ಕಂತಹ ಒಂದು ಬೆಳೆ. ರಾಜ್ಯದಲ್ಲಿ ಸುಮಾರು 14 ಜಿಲ್ಲೆಗಳಲ್ಲಿ ರೈತರು ಈ ಬೆಳೆಯನ್ನು ಅವಲಂಬಿಸಿ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ತೆಂಗು ನಿರಂತರವಾಗಿ ಫಸಲನ್ನು ಕೊಡತಕ್ಕಂತಹ ಬೆಳೆ ಆಗಿದೆ. ಐದಾರು ವರ್ಷಗಳ ಕಾಲ ಯಾವ ರೀತಿ ಮಕ್ಕಳನ್ನು ಮನೆಯಲ್ಲಿ ಸಾಕುತ್ತಾರೆ, ಆ ರೀತಿಯಲ್ಲಿ ಅವು ಫಲ ಕೊಡುವುದಕ್ಕೆ ಬರುವವರೆಗೆ ಕೂಡ ಅವುಗಳನ್ನು ಪೋಷಣೆ ಮಾಡಿ 50-60 ವರ್ಷಗಳ ಕಾಲ ರೈತರಿಗೆ ನೆರವಿಗೆ ಬರುತ್ತದೆ ಎಂದು, ಈ ಬೆಳೆಯನ್ನು ಕಲ್ಪವೃಕ್ಷ ಎಂದು ನಂಬಿ ಅದರಿಂದ ಬರತಕ್ಕಂಥಹ ತೆಂಗಿನ ಕಾಯಿ ಇರಬಹುದು, ಕೊಬ್ಬರಿ ಇರಬಹುದು, ತೆಂಗಿನ ಗರಿ ಇರಬಹುದು, ತೆಂಗಿನ ಕಾಯಿಯಿಂದ ಬಂದ ಮಟ್ಟಿ ಇರಬಹುದು, ಎಲ್ಲವೂ ರೈತರಿಗೆ ವರಮಾನ ಕೊಡತಕ್ಕಂತಹ ಬೆಳೆ ಆಗಿದೆ. ಈ ಬೆಳೆಯನ್ನು ರೈತರು ರಾಜ್ಯದಲ್ಲಿ ಐದು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದಾರೆ. ಸುಮಾರು ಏಳು ಕೋಟಿ ತೆಂಗಿನ ಮರಗಳು ಈ ರಾಜ್ಯದಲ್ಲಿವೆ ಎಂದು ನಾನು ಭಾವಿಸುತ್ತೇನೆ. ಇದು ನಮ್ಮ ದೇಶದಲ್ಲಿ ಕೇರಳ ಬಿಟ್ಟರೆ, ಕರ್ನಾಟಕದಲ್ಲಿಯೇ ಅತಿ ಹೆಚ್ಚು ತೆಂಗು ಬೆಳೆಯುವ ಪ್ರದೇಶವಿದೆ. ಸಾವಿರಾರು ವರ್ಷಗಳಿಂದ ಇತಿಹಾಸ ಇರುವ ಈ ತೆಂಗಿನ ಬೆಳೆಗೆ ಕಳೆದ ಎಂಟು-ಹತ್ತು ವರ್ಷಗಳಿಂದ ಈ ಒಂದು ಸಮಸ್ಯೆಗೆ ಗುರಿಯಾಗಿದೆ. ಕಳೆದ ಎಂಟು-10 ವರ್ಷಗಳಿಂದ ಕಪ್ಪು ತಲೆ ಹುಳ ಬಂದು ತೆಂಗಿನ ಬೆಳೆ ಬಾರದೆ ರೈತರು ತೊಂದರೆಯಲ್ಲಿದ್ದರು, ಆದರೆ ಇತ್ತೀಚೆಗೆ ಕಳೆದ ಎರಡು ವರ್ಷಗಳಿಂದ ಬಂದ ನುಸಿ ಪೀಡೆಯಿಂದ ರೈತ ಕಂಗಾಲಾಗಿದ್ದಾನೆ. ಬೆಳೆಯಲ್ಲಿ ಯಾವುದೇ ಉತ್ಪಾದನೆ ಕಾಣದೆ ನಿರಾಶೆಯಾಗಿ ಕಂಗಾಲಾಗಿರುವ ರೈತನ ಪರಿಸ್ಥಿತಿ ನೋಡುತ್ತಿದ್ದೇವೆ. ನುಸಿ ರೋಗ ಕೇವಲ ಕರ್ನಾಟಕದ ತೆಂಗಿನ ಬೆಳೆಗೆ ಮಾತ್ರ ಬಂದಿರುವಂತಹ ರೋಗ ಅಲ್ಲ. ಇದು 1965ರಲ್ಲಿ ಮೆಕ್ಸಿಕೋದಲ್ಲಿ ಪ್ರಾರಂಭವಾದ ನುಸಿ ರೋಗ ಮಲೇಷಿಯಾ ಶ್ರೀಲಂಕಾ, ತಮಿಳುನಾಡು, ಕೇರಳ ಮತ್ತು ಕರ್ನಾಟಕಕ್ಕೆ ಆವರಿಸಿದೆ. ಇದು ಕೇವಲ ನಮ್ಮ ರಾಜ್ಯದಲ್ಲಿ ಇದ್ದರೆ ನಾವು ಯಾವುದೇ ಒಂದು ಪ್ರಯತ್ನ ಮಾಡಿ ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬಹುದಾಗಿತ್ತು. ಕರ್ನಾಟಕದ ಅಕ್ಕ ಪಕ್ಕದ ರಾಜ್ಯಗಳಲ್ಲಿ ಕೂಡ ಇದೇ ರೀತಿ ಈ ರೋಗ ವ್ಯಾಪಿಸಿರುವುದರಿಂದ ಇದರ ಪೀಡೆ ತೊಲಗಿಸುವುದಕ್ಕೆ ಹೆಚ್ಚಿನ ಕಾಳಜಿಯನ್ನು ನಾವು ವಹಿಸಬೇಕಾಗಿದೆ. ಇವತ್ತು ರಾಜ್ಯದಲ್ಲಿ ತೆಂಗು ಬೆಳೆಗಾರರು 2,000 ಕೋಟಿ ರೂಪಾಯಿಗಳ ವಾರ್ಷಿಕ ವಹಿವಾಟು ನಡೆಸುತ್ತಿದ್ದಾರೆ. ಇತ್ತೀಚೆಗೆ ಕಳೆದ ನಾಲ್ಕೈದು ವರ್ಷಗಳಲ್ಲಿ ಒಂದು ಕಾಯಿಗೆ ಐದು ರೂಪಾಯಿ ಇದ್ದ ತೆಂಗಿನ ಕಾಯಿ ಇವತ್ತು ಎರಡು-ಎರಡೂವರೆ

ರೂಪಾಯಿಗಳಿಗೆ ಬಂದಿದೆ. ಇದಕ್ಕೆ ಕಾರಣ ವಿಶ್ವ ವಾಣಿಜ್ಯ ಒಪ್ಪಂದವಾಗಿದೆ. ತೆಂಗಿನ ಬೆಲೆ ಕುಸಿತವಾಗಿದೆ. ಇನ್ನೊಂದು ಕಡೆ ನುಸಿ ಪೀಡೆ ಯಾವ ತೆಂಗಿನ ಮರಕ್ಕೆ ತಗುಲಿದೆ ಅಲ್ಲಿ ಫಸಲು ಸರಿಯಾಗಿ ಕೊಡದೆ ಇಳುವರಿ ಕಡಿಮೆ ಬಂದು ಮಾರುಕಟ್ಟೆಯಲ್ಲಿ ಯಾರೂ ಕೊಳ್ಳದೆ ಇರುವ ಪರಿಸ್ಥಿತಿ ತೆಂಗಿಗೆ ಬಂದು ನಿಂತಿದೆ. ಇದು ಕಳೆದ ಹತ್ತು ವರ್ಷಗಳಿಗೆ ಅದರ ಬೆಳೆಯನ್ನು ಹೋಲಿಸಿದರೆ ಶೇಕಡ 50ರಷ್ಟು ತೆಂಗಿನ ಬೆಲೆ ಕುಸಿದಿದೆ. ಈ ನುಸಿ ರೋಗದಿಂದ ಅದರ ಇಳುವರಿ ಕೂಡ ಬಹಳ ಕೆಳಮಟ್ಟಕ್ಕೆ ಇಳಿದಿದೆ. ನುಸಿರೋಗ ಸುಮಾರು 7 ಕೋಟಿ ಮರಗಳಿಗೆ ತಗುಲಿದೆ ಎಂದು ಒಂದು ಅಂದಾಜಿನಲ್ಲಿ ಹೇಳುತ್ತಾರೆ. ಎಲ್ಲಾ ಮರಗಳಿಗೆ ತಗುಲಿಲ್ಲ, ಎಂಟರಿಂದ 20 ವರ್ಷದ ಅವಧಿಯಲ್ಲಿ ಇರುವ ಮರ ಏನಿದೆ ಅದಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನುಸಿ ಪೀಡೆ ತಗುಲಿದೆ. ಒಂದು ಅಂದಾಜಿನ ಪ್ರಕಾರ ಮೂರು ಕೋಟಿ ಮರಗಳಿಗೆ ನುಸಿ ಪೀಡೆ ತಗುಲಿದೆ ಎಂದು ಹೇಳಬಹುದು. ಈ ನುಸಿ ರೋಗವನ್ನು ತಡೆಗಟ್ಟುವುದಕ್ಕೆ ಕಳೆದ ಎರಡು ವರ್ಷಗಳಿಂದ ರಾಜ್ಯ ಸರ್ಕಾರ ಸಾಕಷ್ಟು ಪ್ರಯತ್ನ ಮಾಡಿದೆ. ನಾವೂ ಕೂಡ ಹಿಂದಿನ ಎರಡು ವರ್ಷಗಳಿಂದ ನುಸಿ ರೋಗಕ್ಕೆ ಪರಿಹಾರ ಮಾರ್ಗ ಕಂಡು ಹಿಡಿಯಬೇಕು, ರೈತರಿಗೆ ನೆರವಾಗಬೇಕು, ರೋಗ ತೊಲಗಿಸುವುದಕ್ಕೆ ಸರ್ಕಾರ ಮುಂದಾಗಬೇಕೆಂದು ತಿಳಿಸಿದ್ದೆವು. ಮಾನ್ಯ ತೋಟಗಾರಿಕೆ ಸಚಿವರು ಅನೇಕ ಔಷಧಿಗಳನ್ನು ಸೂಚಿಸಿ ಜಿಲ್ಲಾ ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಮಾಡಿ ನಮ್ಮ ಜಿಲ್ಲೆಗಳಿಗೆ ಕೂಡ ಬಂದು ಅಲ್ಲಿ ರೈತ ಪ್ರತಿನಿಧಿಗಳು ಮತ್ತು ಅಧಿಕಾರಿಗಳನ್ನು ಕೂರಿಸಿಕೊಂಡು ಸಾಕಷ್ಟು ವಿಚಾರ ಚರ್ಚೆ ಮಾಡಿದ್ದಾರೆ. ಇವರು ಕೊಟ್ಟಂತಹ ಮಾನೋಪ್ರೊಟೋಫಾಸ್ ಇರಬಹುದು, ಟೈಸೋಫಾಸ್ ಇರಬಹುದು ಅಥವಾ ನೀಮ್ ಟ್ರೀಟ್ ಇರಬಹುದು, ಇವೆಲ್ಲಾ ರೈತರು ಯಾರ್ಯಾರು ತೆಂಗಿನ ಬೆಳೆ ಉಳಿಸಬೇಕೆಂದು ಆಸಕ್ತಿಯಿಂದ ಪ್ರಾರಂಭ ಮಾಡಿದರು, ಅವರು ನೀವು ಕೊಟ್ಟ ಸಬ್ಸಿಡಿ ಯೋಜನೆಯನ್ನು ಬಳಸಬೇಕೆಂದು ಪ್ರಯತ್ನಗಳನ್ನು ಮಾಡಿದ್ದಾರೆ. ಆದರೆ ಈ ಪ್ರಯತ್ನದಿಂದ ನುಸಿ ರೋಗ ಇದುವರೆಗೆ ಕಡಿಮೆಯಾಗಲಿಲ್ಲ. ನಾನು ಸ್ವತಃ ತೆಂಗು ಬೆಳೆಗಾರನಾಗಿದ್ದು, ಮಾನೋಪ್ರೊಟೋಫಾಸ್ ಒಂದು ವರ್ಷದಲ್ಲಿ ಮೂರು ಬಾರಿ ಬೇರಿಗೆ ಹಾಕಬೇಕಾಗುತ್ತದೆ. ಈ ಔಷಧಿ ಕೊಡುವ ಸಮಯದಲ್ಲಿ 45 ದಿವಸಗಳ ಕಾಲ ಎಳನೀರು ಕೀಳಬಾರದು, ತೆಂಗಿನಕಾಯಿ ಕೀಳಬಾರದು ಎಂದು ತಜ್ಞರು ಹೇಳಿದ್ದಾರೆ. ನಾವು ಔಷಧಿ ಸಿಂಪರಣೆ ಮಾಡಿರುವ ಸಮಯದಲ್ಲಿ ಎಳನೀರು ಕಿತ್ತು ಕುಡಿದರೆ ಅದರಿಂದ ದೇಹಕ್ಕೆ ಬಾಧೆ ಬರುತ್ತದೆ, ಇಂತಹ ಮರಗಳಿಂದ ಯಾವುದೇ ತೆಂಗಿನ ಕಾಯಿಗಳನ್ನು ಮಾರಾಟಕ್ಕೆ ಕೊಡಬಾರದು, ಅವುಗಳನ್ನು ಗುಂಡಿಯಲ್ಲಿ ಸುರಿಯಬೇಕೆನ್ನುವ ನಿಯಮ ಇರುವುದರಿಂದ ಅವೂ ಕೂಡ ವೇಸ್ಟ್ ಆಗಿವೆ. ಈ ಔಷಧಿ ಅಷ್ಟು ಪ್ರಯೋಜನಕಾರಿಯಾಗಿಲ್ಲ. ಎರಡು ವರ್ಷಗಳಿಂದ ತೆಂಗಿನ ಬೆಳೆಗಾರರು ಬಹಳ ಸಂಕಷ್ಟಕ್ಕೆ ಸಿಲುಕಿ ಇವತ್ತು ಅವರ ಆರ್ಥಿಕ ಸ್ಥಿತಿ ಬಹಳ ಅಧೋಗತಿಗೆ ಇಳಿದಿದೆ. ಜೀವನ ನಡೆಸುವುದು ಬಹಳ ಕಷ್ಟವಾಗಿದೆ. ಬಹುತೇಕ ಗ್ರಾಮಾಂತರ ಪ್ರದೇಶಗಳಲ್ಲಿ ತೆಂಗು ಬೆಳೆಯುವವರು ಆರ್ಥಿಕವಾಗಿ ಮೇಲೇರಬೇಕೆಂಬ ಉದ್ದೇಶದಿಂದ ತೆಂಗನ್ನು ಬೆಳೆಸಿರುತ್ತಾರೆ. ನುಸಿ ರೋಗ ಬಂದಿದೆ ಎಂದು ಯಾರೂ ತೆಂಗಿನ ಮರವನ್ನು ಕಡಿದು ಇನ್ನು ಯಾವುದೋ ಬೇರೆ ಬೆಳೆ ಬೆಳೆಯುವುದಾಗಲಿ, ಇಂಟರ್ ಕ್ರಾಪ್

ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ನೆರಳಿನಲ್ಲಿ ಯಾವುದೇ ಬೇರೆ ಬೆಳೆ ಬೆಳೆಯುವುದಕ್ಕೆ ಸಾಧ್ಯವಿಲ್ಲ. ತೆಂಗಿನ ಮರಗಳನ್ನು ಒಂದು ಸಾರಿ ಬೆಳೆದವರು ಯಾರೂ ಕೂಡ ಆ ಮರಗಳನ್ನು ಕಡಿಯುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಇಂತಹ ಸನ್ನಿವೇಶದಲ್ಲಿ ನೀವು ಕೊಟ್ಟರುವ ಔಷಧಿ ಕೂಡ ಯಾವುದೇ ರೀತಿ ರೈತರಿಗೆ ಪರಿಣಾಮ ಬೀರುತ್ತಿಲ್ಲ. ಇನ್ನು ಏನಾದರೂ ಬೇರೆ ಮಾರ್ಗ ತೋರಿಸಿ ರೈತರ ನೆರವಿಗೆ ಬನ್ನಿ ಎಂದರೆ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇತ್ತೀಚೆಗೆ ಮೂರು-ನಾಲ್ಕು ತಿಂಗಳುಗಳಿಂದ ರೈತರು ತಮ್ಮದೇ ಆದ ಮಾರ್ಗ ಕಂಡುಕೊಂಡು ಈ ತೆಂಗಿನ ಮರದಿಂದ ನೀರಾ ಇಳಿಸತಕ್ಕಂತಹ ಪ್ರಯತ್ನಕ್ಕೆ 13-14 ಜಿಲ್ಲೆಗಳಲ್ಲಿ ಅಲ್ಲಲ್ಲಿ ಪ್ರಯತ್ನ ಮಾಡಿದ್ದಾರೆ. ನೀರಾ ಇಳಿಸಬೇಕೆಂಬುದು ಯಾವ ರೈತನ ಅಪೇಕ್ಷೆಯೂ ಆಗಿಲ್ಲ. ಯಾವ ರೈತ ಕೂಡ ನೀರಾ ಇಳಿಸಿ ಸೇಂದಿ ಮಾಡಿ ಬೇರೆ ಜನರಿಗೆ ಕುಡಿಸಿ, ಆರೋಗ್ಯ ಹಾಳು ಮಾಡಬೇಕು, ಅನಾರೋಗ್ಯಕ್ಕೆ ತುತ್ತಾಗುವ ಹಾಗೆ ಮಾಡಬೇಕು, ಆರ್ಥಿಕವಾಗಿ ಹದಗೆಡಿಸಬೇಕು ಎನ್ನುವ ದೃಷ್ಟಿಯಿಂದ ಯಾರೂ ಕೂಡ ಮಾಡುವುದಿಲ್ಲ, ಅದು ರೈತನ ಅಪೇಕ್ಷೆಯೂ ಅಲ್ಲ. ರೈತ ಕೇಳುವುದು ನಮ್ಮ ತೆಂಗಿನ ಮರಕ್ಕೆ ನುಸಿ ರೋಗ ತಗುಲಿದೆ, ಈ ರೋಗವನ್ನು ಹೋಗಲಾಡಿಸಿ, ಇಲ್ಲದಿದ್ದರೆ ನಮಗೆ ನೀರಾ ಇಳಿಸುವುದಕ್ಕೆ ಅನುಮತಿ ಕೊಡಿ ಎಂದು ಕೇಳುತ್ತಾರೆ. ನೀರಾದಿಂದ ಏನು ದುಷ್ಪರಿಣಾಮ ಆಗುತ್ತದೆ, ಸೇಂದಿಯಲ್ಲಿ ಬೇರೆ ಮಿಕ್ಸ್ ಮಾಡಿ ಅಡಲ್ಟ್‌ರೇಟ್ ಮಾಡುತ್ತಾರೆ. ಅದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ ಎಂದು ತಿಳಿಯುವ ಮಟ್ಟಕ್ಕೆ ರೈತ ಬಂದಿಲ್ಲ. ನಾವು ತೆಂಗು ಬೆಳೆದಿದ್ದೇವೆ, ನಮಗೆ ಪರಿಹಾರ ಹುಡುಕಿ ಕೊಡಿ ಎಂದು ಕೇಳುತ್ತಿದ್ದಾರೆ. ಎರಡು ವರ್ಷಗಳಿಂದ ನೀವು ಕೊಟ್ಟರುವ ಔಷಧಿಗಳನ್ನು ಸಿಂಪಡಿಸಿ ಯಾವುದೇ ಪರಿಹಾರ ಮಾರ್ಗ ಕಾಣದೆ ಇರುವುದರಿಂದ ಅವರೇ ಸ್ವಯಂ ಪ್ರೇರಣೆಯಿಂದ ನೀರಾ ಇಳಿಸುವ ಕಾರ್ಯ ಪ್ರಾರಂಭ ಮಾಡಿದ್ದಾರೆ. ಮೂರು ಕೋಟಿ ಮರ ಅಥವಾ ನಿಮ್ಮ ಅಂದಾಜಿನ ಪ್ರಕಾರ ಪ್ರತಿಯೊಂದು ಕಡೆ ಸಮೀಕ್ಷೆ ಮಾಡಿ ಎಲ್ಲೆಲ್ಲಿ ಮರಗಳಿಗೆ ನುಸಿ ರೋಗ ತುತ್ತಾಗಿದೆ ಅಲ್ಲಿ ನಮ್ಮ ಅನುಭವದ ಪ್ರಕಾರ 80 ರಿಂದ 100-120 ಕಾಯಿ ಒಂದು ತೆಂಗಿನ ಕಾಯಿ ಮರದಿಂದ ಬರುವುದಕ್ಕೆ ಸಾಧ್ಯ ಇದೆ. 12 ಹೊಂಬಾಳೆಗಳು ಒಂದು ವರ್ಷದಲ್ಲಿ ಒಂದು ತೆಂಗಿನ ಮರದಲ್ಲಿ ಬಿಡುತ್ತವೆ. ಈ ಹೊಂಬಾಳೆಯಲ್ಲಿ 8 ರಿಂದ 12 ತೆಂಗಿನ ಕಾಯಿಗಳು ಬರುತ್ತವೆ. ಆ ಆಧಾರ ಇಟ್ಟುಕೊಂಡರೆ 100-120 ಕಾಯಿ, ಕಡಿಮೆ ಎಂದರೆ 80 ಕಾಯಿಗಳು ಒಂದು ಆರೋಗ್ಯವಂತ ಮರದಿಂದ ಬರುತ್ತವೆ. ಇಂತಹ ಸಂದರ್ಭದಲ್ಲಿ 15-20-25 ಕಾಯಿಗಳನ್ನು ವರ್ಷಕ್ಕೆ ಪಡೆಯುವುದು ದುರ್ಲಭವಾಗಿದೆ. ಇದರ ಜೊತೆಗೆ ಸೈಜ್ ಬಹಳ ಕಡಿಮೆಯಾಗಿ ಇರುವುದು ಪತ್ರಿಕೆಯಲ್ಲಿ ಫೋಟೋ ಸಹಿತ ಬಂದಿದೆ. ಫೋಟೋ ನೋಡಿದರೆ ಗೊತ್ತಾಗುತ್ತದೆ. ತೆಂಗಿನ ಕಾಯಿಯನ್ನು ನೋಡಿದರೆ ಯಾರೂ ಕೂಡ ಅಡಿಗೆಗೆ ಬಳಸುವವರು ಇದನ್ನು ಬಳಸಬೇಕೆಂದು ಮನಸ್ಸು ಮಾಡುವುದಿಲ್ಲ. ತೆಂಗಿನ ಉತ್ಪನ್ನದಲ್ಲಿ ತೆಂಗಿನ ಮಟ್ಟಿಯಿಂದ ಅನೇಕ ಟಯರ್ ಫ್ಯಾಕ್ಟರಿಗಳು ಮತ್ತು ಅದರ ಕಾರ್ಮಿಕರು ಅದರ ಮೇಲೆ ಅವಲಂಬಿತರಾಗಿದ್ದಾರೆ. ನಾರಿನ ಮೂಲಕ ಬೇರೆ ಬೇರೆ ಮ್ಯಾಟ್ ಮತ್ತೊಂದು ಮಾಡುತ್ತಾರೆ. ಟಯರ್ ಕಾರ್ಪೊರೇಷನ್ ನಡೆಯುತ್ತಿರುವುದು ಮಟ್ಟಿಯಿಂದ. ನುಸಿ ರೋಗಕ್ಕೆ ತುತ್ತಾಗಿರುವುದರಿಂದ ತೆಂಗಿನ ಸಿಪ್ಪೆಯಿಂದ

ನಾರನ್ನು ತೆಗೆಯುವುದಕ್ಕೆ ಕೂಡ ಸಾಧ್ಯ ಇಲ್ಲದೆ ಇರುವ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ತೆಂಗಿನ ಕಾಯಿಯಿಂದ ಮಟ್ಟಿ ತೆಗೆಯತಕ್ಕಂತಹ ಕೆಲಸಕ್ಕೂ ಬಹಳ ಶಕ್ತಿವಂತರಿಗೆ ಕೊಟ್ಟು ಮಾಡಿಸಬೇಕಾಗಿದೆ. ಈ ರೀತಿ ತೆಂಗು ಬೆಳೆದ ರೈತ ಬಹಳ ಸಂಕಷ್ಟಕ್ಕೆ ಈಡಾಗಿದ್ದಾನೆ. ಆ ಕಾರಣದಿಂದ ಅವರಿಗೆ ಏನಾದರೂ ಪರಿಹಾರ ಮಾಡಬೇಕೆಂದು ಸರ್ಕಾರ ಮಾಡಿದ ಪ್ರಯತ್ನದಲ್ಲಿ ವಿಫಲತೆಯನ್ನು ಕಂಡಿದ್ದರಿಂದ ಬೇರೆಯಾದ ಮಾರ್ಗವನ್ನು ರೈತ ಹಿಡಿದಿದ್ದಾನೆ. ಸಾಮಾನ್ಯ ತಿಳುವಳಿಕೆಯ ಪ್ರಕಾರ ಬೆಳಿಗ್ಗೆ ಆರು ಗಂಟೆಯವರೆಗೆ ನೀರಾ ಆಗಿರುತ್ತದೆ. ಆ ನಂತರ ಸೂರ್ಯ ಕಿರಣ ಬಿದ್ದ ಮೇಲೆ ಅದು ಸೇಂದಿ ಆಗಿ ಪರಿವರ್ತನೆ ಆಗುತ್ತದೆ ಎಂದು ಅಭಿಪ್ರಾಯ ಇದೆ. ಇದು ವಾಸ್ತವ ಸಂಗತಿ ಕೂಡ. ನೀರಾ ಇಳಿಸಿ ನೀರಾ ಆಗಿಯೇ ಕುಡಿದರೆ ಸಕ್ಕರೆ ಕಾಯಿಲೆ, ಗ್ಯಾಸ್ಟ್ರಿಕ್ ಹಾಗೂ ಇತರ ಕಾಯಿಲೆಗಳು ಗುಣಮುಖವಾಗುತ್ತದೆ ಎಂದು ಹಿಂದಿನಿಂದ ಬಂದಿರುವಂತಹ ಅಭಿಪ್ರಾಯ. ಅದು ವಾಸ್ತವ ಕೂಡ ಹೌದು. ನಮ್ಮಲ್ಲಿ ಇಂತಹ ಪ್ರಯೋಗಗಳನ್ನು ನಡೆಸಿದ್ದೇವೆ. ಇವತ್ತಿಗೂ ಕೂಡ ನಮ್ಮ ಜಿಲ್ಲೆಯಲ್ಲಿ ಬೆಳಿಗ್ಗೆ ಐದು ಗಂಟೆಗೆ ಮೋಟಾರ್ ಸೈಕಲ್‌ಗಳಲ್ಲಿ, ಕಾರುಗಳಲ್ಲಿ ಯಾವ ರೀತಿ ಪ್ರವೇಟ್ ಡಾಕ್ಟರ್ ಹತ್ತಿರ ಕೂಪನ್ ಕೊಟ್ಟು ಔಷಧಿ ಪಡೆಯುತ್ತೇವೆ, ಆ ರೀತಿಯಲ್ಲಿ ನೀರಾ ಕುಡಿಯುವುದಕ್ಕೆ ರಾತ್ರಿ ಹೊತ್ತು ಹೋಗಿ ಕಾಯುತ್ತಾ ಕುಳಿತಿರುತ್ತಾರೆ. ನುಸಿ ರೋಗಕ್ಕೆ ನೀವು ಕೊಟ್ಟಿರುವ ಔಷಧಿ ಒಂದು ಸಾರಿ ಸಿಂಪಡಿಸಬಹುದು, ಎರಡು ಸಾರಿ ಸಿಂಪಡಿಸಬಹುದು, ಪ್ರತಿ ವರ್ಷ ನಾವು ಔಷಧಿ ಸಿಂಪಡಿಸುತ್ತಾ ಹೋದರೆ ಮರ ಕೂಡ ತನ್ನತನವನ್ನು ಕಳೆದುಕೊಂಡು ಹಾಳಾಗುವ ಪರಿಸ್ಥಿತಿ ಇದೆ. ಅಂತಹ ಔಷಧಿ ಕಟ್ಟಿದ ಮರದಿಂದ ಎಳನೀರಾಗಲಿ, ಕಾಯಿಯಾಗಲಿ ಉಪಯೋಗಿಸುವುದಕ್ಕೆ ಯೋಗ್ಯವಾಗಿರುವುದಿಲ್ಲ. ಔಷಧಿ ಕೊಡುವ ಸಂದರ್ಭದಲ್ಲಿ ಆ ಜಮೀನಿನಲ್ಲಿ ಒಂದು ವಾರದವರೆಗೆ ಯಾರೂ ಓಡಾಡುವುದಕ್ಕೆ ಆಗುವುದಿಲ್ಲ. ಆ ವಾಸನೆಯಿಂದ ತಲೆಸುತ್ತು ಮುಂತಾದವು ಬರುತ್ತವೆ. ಇಂತಹ ಸನ್ನಿವೇಶದಲ್ಲಿ ನಾವು ಅನ್ಯಮಾರ್ಗ ಇಲ್ಲದೆ ನೀರಾ ಇಳಿಸುವುದಕ್ಕೆ ಅನುಮತಿ ಕೇಳುತ್ತಿದ್ದೇವೆ. ಇದನ್ನು ಯಾವ ರೀತಿ ಇಳಿಸಬೇಕು, ಯಾವ ರೀತಿ ಮಾರುಕಟ್ಟೆಗೆ ಮಾರಬೇಕು ಅದು ಸರ್ಕಾರಕ್ಕೆ ಬಿಟ್ಟ ವಿಚಾರ. ನೀರಾ ಇಳಿಸಲು ಅನುಮತಿ ಕೊಡುವುದರಿಂದ ರೈತರ ಆರ್ಥಿಕ ಸ್ಥಿತಿ ಸುಧಾರಣೆಯಾಗುತ್ತದೆ. ನೀರಾ ಇಳಿಸಲು ಅನುಮತಿ ಕೊಟ್ಟ ತಕ್ಷಣ ಎಲ್ಲಾ ಏಳು ಕೋಟಿ ಮರಗಳಿಗೂ ಯಾರೂ ನೀರಾ ಇಳಿಸುವುದಕ್ಕೆ ಹೋಗುವುದಿಲ್ಲ. ಒಂದು ತೆಂಗಿನ ಮರದಿಂದ ನಾಲ್ಕು ತಿಂಗಳು ಮಾತ್ರ ನೀರಾ ಇಳಿಸುವುದಕ್ಕೆ ಸಾಧ್ಯವೇ ಹೊರತು ವರ್ಷ ಪೂರ್ತಿ ಇಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನೀರಾ ಹೆಚ್ಚು ಆರೋಗ್ಯ ಪೂರ್ಣ ಮರದಿಂದ ಬರುವುದಕ್ಕೆ ಸಾಧ್ಯವೇ ಹೊರತು, ರೋಗಗ್ರಸ್ತವಾಗಿರುವ ಎಲ್ಲಾ ತೆಂಗಿನ ಮರಗಳನ್ನು ಅದರ ವ್ಯಾಪ್ತಿಯಲ್ಲಿ ತೆಗೆದುಕೊಂಡು ನೀರಾ ಇಳಿಸುವುದಕ್ಕೆ ಸಾಧ್ಯವಾಗುವುದಿಲ್ಲ.

(ಮಾನ್ಯ ಶ್ರೀ ರಾಜುಗೌಡರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

100 ರಿಂದ 200 ಮರಗಳ ತೆಂಗಿನ ತೋಟ ಇರುವ ರೈತನಿಗೆ 20-30 ಮರಕ್ಕೆ ನೀರಾ ಇಳಿಸುವುದಕ್ಕೆ ಅನುಮತಿ ಕೊಟ್ಟರೆ ಅವರಿಗೆ ಈ ರೀತಿಯಾದರೂ ಸ್ವಲ್ಪ ಹಣ ನೋಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ನಾವು ಖಾಯಂ ಆಗಿ ಕೊಡಿ ಎಂದು ಕೇಳುತ್ತಿಲ್ಲ. ಒಂದು ಅಥವಾ ಎರಡು ವರ್ಷಗಳ ಅವಧಿಗೆ ಪ್ರಾಯೋಗಿಕವಾಗಿ ಕೊಟ್ಟು ಇದರ ಪರಿಣಾಮ ಏನಾಗುತ್ತದೆ ಎನ್ನುವುದರ ಮೇಲೆ ಮುಂದಿನ ತೀರ್ಮಾನ ಮಾಡಬಹುದಾಗಿತ್ತು. ಕೇರಳ ರಾಜ್ಯದಲ್ಲಿ ನಮ್ಮ ಪಕ್ಕದ ರಾಜ್ಯಗಳಲ್ಲಿ ಅರ್ಯಾಕ್ ಇಲ್ಲ. ಅಲ್ಲಿ ಇವತ್ತಿಗೂ ಸೇಂದಿಯೇ ಚಾಲನೆಯಲ್ಲಿರುವುದು. ಕೋ-ಆಪರೇಟಿವ್ ಸೊಸೈಟಿಗಳನ್ನು ರಚನೆ ಮಾಡಿ ಆ ಸೊಸೈಟಿಗಳು ಗುತ್ತಿಗೆ ರೂಪದಲ್ಲಿ ತೆಂಗಿನ ತೋಟಗಳನ್ನು ಪಡೆದುಕೊಂಡು ನೀರಾ ಇಳಿಸಿ ಸೊಸೈಟಿಯವರೇ ಮಾರುಕಟ್ಟೆಗೆ ತಂದು ಮಾರುತ್ತಿದ್ದಾರೆ. ಅಲ್ಲಿ ಯಾವುದೇ ರೀತಿಯ ಎಕ್ಸೈಸ್ ಆಕ್ಷನ್ ಆಗಲಿ, ಇನ್ನೊಂದಾಗಲಿ ನಡೆಯುತ್ತಿಲ್ಲ. ಅಗು ಮೇಜರ್ ಆಗಿ ತೆಂಗಿನ ಮರದಿಂದ ಇಳಿಸಿ ಮಾಡಿರತಕ್ಕಂಥಾದ್ದು. ಅಲ್ಲಿ ಆರೋಗ್ಯಕ್ಕೆ ಯಾವುದೇ ಹಾನಿಯಾಗದೆ ಇರುವ ಪಾನೀಯ, ಕರ್ನಾಟಕದಲ್ಲಿ ಕೊಟ್ಟರೆ ಬಹಳ ದುಷ್ಪರಿಣಾಮ ಬೀರುತ್ತದೆ ಎನ್ನುವುದು ಅರ್ಥವಿಲ್ಲದ ವಾದವಾಗುತ್ತದೆ. ಕೇರಳದಲ್ಲಿ ಯಾವ ರೀತಿ ಕೆಲಸ ನಡೆಯುತ್ತಿದೆ, ಅದೇ ಮಾದರಿಯಲ್ಲಿ ಕರ್ನಾಟಕದಲ್ಲಿ ಜಾರಿಗೆ ತರಬೇಕೆಂದು ನಿಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನೀರಾವನ್ನು ಸೇಂದಿಯಾಗಿ ಪರಿವರ್ತನೆ ಮಾಡಿ ಮಾರಿದರೂ ಕೂಡ ಈಗಿನ ನಿಮ್ಮ ಸಾರಾಯಿ ಏನಿದೆ, ಅದರಷ್ಟು ಇದು ಆರೋಗ್ಯಕ್ಕೆ ಹಾನಿಕರವಲ್ಲ. ಕೇವಲ ನಾಲ್ಕು ಪರ್ಸೆಂಟ್‌ನಷ್ಟು ಆಲ್ಕೋಹಾಲ್ ಇರುವುದರಿಂದ ಅಂತಹ ಕೆಟ್ಟದ್ದೇನೂ ಅಲ್ಲ. ಮಾನ್ಯ ಭೈರೇಗೌಡರ ಅಧ್ಯಕ್ಷತೆಯಲ್ಲಿ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ವಿಷಯ ಸಮಿತಿಯವರು ಈ ವಿಷಯವನ್ನು ಸುದೀರ್ಘವಾಗಿ ಚರ್ಚೆ ಮಾಡಿದ್ದಾರೆ. ಮಾನ್ಯ ಭೈರೇಗೌಡರು ಅಧ್ಯಕ್ಷತೆಯಲ್ಲಿ ಧಾರವಾಡ ಅಗ್ರಿಕಲ್ಚರ್ ಯೂನಿವರ್ಸಿಟಿಯವರಿಗೆ, ಬೆಂಗಳೂರು ಯೂನಿವರ್ಸಿಟಿಯವರಿಗೆ ಹಾಗೂ ಆಂಟೋಮಾಲಜಿ ಪ್ರೊಫೆಸರ್‌ರವರುಗಳನ್ನೆಲ್ಲಾ ಕರೆಸಿದ್ದರು. ಇವರೆಲ್ಲರೂ ಕೂಡ ನುಸಿ ರೋಗವನ್ನು ತಡೆಹಿಡಿಯುವುದಕ್ಕಾಗುವುದಿಲ್ಲ, ಇದು ಬರೀ ನಮ್ಮ ರಾಜ್ಯದ ಪೀಡೆ ಅಲ್ಲ, ಅಂತರರಾಷ್ಟ್ರೀಯ ಪೀಡೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇಲ್ಲಿ ಹೋದರೂ ಸಹ ಇದು ತಮಿಳುನಾಡು, ಕೇರಳದಲ್ಲಿ ಇರುತ್ತದೆ. ಅಥವಾ ಇಲ್ಲವೆ ಇದ್ದರೆ ಶ್ರೀಲಂಕಾದಿಂದ ಮತ್ತೆ ವಾಪಸ್ಸು ಬರುತ್ತದೆ. ಹಾಗಾಗಿ ಇವತ್ತು ತೆಂಗಿನ ತೋಟಗಾರರು ತೆಂಗಿನ ತೋಟ ಉಳಿಸಿ ಕೊಳ್ಳಬೇಕೋ ಇಲ್ಲವೋ ಎನ್ನುವ ಎರಡೇ ತೀರ್ಮಾನ ಉಳಿದಿರುವಂತಹ ಸನ್ನಿವೇಶದಲ್ಲಿ ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕು. ಬೇರೆ ಎಲ್ಲಾ ವಿಚಾರಗಳಿಗಿಂತ ಇದು ಅತೀ ಮುಖ್ಯವಾಗಿದೆ. ಲಕ್ಷಾಂತರ ರೈತರು ಇವತ್ತು ಈ ಬೆಳೆಯನ್ನು ಅವಲಂಬಿಸಿ ಜೀವನ ನಡೆಸುತ್ತಿದ್ದಾರೆ. ಹಾಗಾಗಿ ನಮ್ಮ ವಿಷಯ ಸಮಿತಿಯಲ್ಲಿ ಕೂಡ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಿ, ಸರ್ಕಾರ ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಶಿಫಾರಸ್ಸು ಕೂಡ ಮಾಡಿದ್ದೇವೆ. ಈ ನೀರಾ ಇಳಿಸಿ ಮಾರಾಟ ಮಾಡಬೇಕೇ ಬೇಡವೇ ಎನ್ನುವುದರ ಬಗ್ಗೆ ಚರ್ಚೆ ಮಾಡಿ ತೀರ್ಮಾನ ಮಾಡಬೇಕೆಂದು ಹೇಳುತ್ತಾ, ನೀರಾ ಇಳಿಸಿ ಆಕ್ಷನ್ ಮಾಡಿದರೆ ಇವುಗೆ ಆರ್ಥಿಕವಾಗಿ ಸರ್ಕಾರಕ್ಕೆ ಹಿನ್ನಡೆಯಾಗುತ್ತದೆ, ಕೊರತೆಯಾಗುತ್ತದೆ,

ಅದರಿಂದ ಗೊಂದಲವುಂಟಾಗುತ್ತದೆ ಎನ್ನುವ ಭಾವನೆ ನಿಮ್ಮಲ್ಲಿ ಇದ್ದರೆ ಅದಕ್ಕೆ ಇನ್ನೂ ಅನೇಕ ಮಾರ್ಗಗಳಿವೆ. ಈಗ ರಾಜ್ಯದಲ್ಲಿರುವಂತಹ ಎಲ್ಲಾ ತೆಂಗಿನ ಮರದ ಹೊಂಬಾಳೆಯನ್ನು ಸರ್ಕಾರವೇ ಕಟ್ ಮಾಡಿಸಲಿ. ಇದೂ ಒಂದು ಮಾರ್ಗವಿದೆ. ಇದನ್ನು ನಾನು ಪ್ರಾಕ್ಟಿಕಲ್ ಪರ್ಸನ್ ಆಗಿ ಹೇಳುತ್ತಿದ್ದೇನೆ. ಏಕೆಂದರೆ ಕಾಯಿ ಬಿಡುವಂತಹ ಗೊಂಚಲು ಏನಿದೆ ಅದರ ಸಂದಿಯಲ್ಲೇ ನುಸಿ ಬಂದು ಸೇರುವುದು. ಆದುದರಿಂದ ಅದನ್ನು ಏಕಕಾಲದಲ್ಲಿ ಸರ್ಕಾರ ಪಲ್ಸ್‌ಪೊಲಿಯೋ ಕಾರ್ಯಕ್ರಮದ ತರಹ ಏನು ಮಾಡುತ್ತೀರಿ, ಅದೇ ತರಹ ಎಲ್ಲಾ ಇಲಾಖೆಗಳನ್ನು ಒಟ್ಟುಗೂಡಿಸಿ, ಹೊಂಬಾಳೆಗಳನ್ನು ಕತ್ತರಿಸಿ ಹಾಕಬೇಕು. ಈಗ ಅವರೇಜ್ ಆಗಿ ಒಂದು ಮರ ಎಂಬತ್ತರಿಂದ ನೂರು ಕಾಯಿ ಬಿಟ್ಟರೆ, ಇವತ್ತಿನ ರೇಟಿನ ಪ್ರಕಾರ ಒಂದು ವರ್ಷಕ್ಕೆ ಎಷ್ಟು ಬಿಡುತ್ತದೆ ಎಂದು ಲೆಕ್ಕ ಹಾಕಿದರೆ, ನೂರು ಕಾಯಿ ಎಂದು ಇಟ್ಟುಕೊಂಡರೆ 250 ರೂಪಾಯಿ ಒಂದು ಮರಕ್ಕೆ ಬರುತ್ತದೆ. ನೀವು ಅದಕ್ಕೆ 50 ಪರ್ಸೆಂಟ್ ಎಂದರೆ 100 ರಿಂದ 150 ರೂಪಾಯಿಗಳ ಪರಿಹಾರವನ್ನು ಕೊಡಿ. ಆ ಒಂದು ಪರಿಹಾರವನ್ನು ರೈತರಿಗೆ ಕೊಡಿಸಿದರೆ ಒಳ್ಳೆಯದು. ಏಕೆಂದರೆ ನೀವು ಈಗ ಸಿಂಪಡಿಸುವ ಔಷಧದ ಏಚಾರದಲ್ಲಿ ತೆಗೆದುಕೊಂಡರೆ ನಾಲ್ಕು ಕೋಟಿ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿದ್ದೀರಿ. ಅದರ ಪರಿಣಾಮ ಏನಾಯಿತು? ಅದನ್ನು ನೀವೇ ಸಮಾಲೋಚನೆ ಮಾಡಿ ಹೇಳಿ. ಒಂದು, ಒಂದೂವರೆ ವರ್ಷದಿಂದ ಏನಾದರೂ ಸುಧಾರಣೆಯಾಗಿದೆಯಾ? ಆಗಿದೆ ಎಂದರೆ ನಾನು ಇದರ ಬಗ್ಗೆ ಮಾತನಾಡುವುದಿಲ್ಲ. ಸುಧಾರಣೆ ಆಗದೇ ಇರುವುದರಿಂದ ನಾನು ಹೇಳಿದಂತಹ ಏಚಾರದಲ್ಲಿ 700 ಕೋಟಿ ರೂಪಾಯಿಗಳಷ್ಟು ಸರ್ಕಾರಕ್ಕೆ ಹೊರೆಯಾಗಬಹುದು. ಕೇಂದ್ರ ಸರ್ಕಾರದಲ್ಲಿ ಸೆಂಟ್ರಲ್ ಕೋಕೋನೆಟ್ ಬೋರ್ಡ್ ಎಂದಿದೆ. ನೀವು ಈ ಒಂದು ಯೋಜನೆಯನ್ನು ಇಟ್ಟುಕೊಂಡರೂ ಕೂಡ ಅವರು 25 ರಿಂದ 30 ಪರ್ಸೆಂಟ್‌ನವರೆಗೂ ಶೇರ್ ಅನ್ನು ಕೊಡುತ್ತಾರೆ. ಅವರ ಹತ್ತಿರ ಸಹಾಯ ತೆಗೆದುಕೊಂಡು ರೈತರಿಗೆ ಪರಿಹಾರದ ಹಣವನ್ನು ಕೊಟ್ಟು ಅವರ ತೆಂಗಿನ ಮರದ ಹೊಂಬಾಳೆಗಳನ್ನು ಒಂದೇ ಸಲ ಕಡಿದು ಹಾಕಿಸಿದರೆ ಇದು ಕಂಟ್ರೋಲ್‌ಗೆ ಬರಬಹುದೇ ಹೊರತು ನಿಮ್ಮ ಔಷಧದಿಂದ ಕಂಟ್ರೋಲ್‌ಗೆ ಬರುವುದಿಲ್ಲ. ತಾವೇನು ಈಗ ಔಷಧವನ್ನು ವಿತರಣೆ ಮಾಡಿಸುತ್ತಿದ್ದೀರಿ, ಅದನ್ನು ಮೂರು ರೀತಿಯಲ್ಲಿ ಕೊಡುತ್ತಿದ್ದಾರೆ.

ಶ್ರೀ ಕೆ.ಹೆಚ್.ಹನುಮೇಗೌಡ(ಹಾಸನ): ಮಾನ್ಯ ಅಧ್ಯಕ್ಷರೆ, ನಾನು ಒಂದು ಕ್ಲಾರಿಫೀಕೇಷನ್ ಕೇಳುತ್ತೇನೆ. ನೀರಾ ಬಗ್ಗೆ ಅಷ್ಟೊಂದು ಏವರವಾಗಿ ಹೇಳಿದಿರಲ್ಲಾ, ತಮಗೇನು ಅನುಭವವಿದೆ? ಇನ್ನು ಎರಡನೆಯದಾಗಿ ಇದು ಬ್ಯಾಕ್ಟೀರಿಯಾದಿಂದ ಬರತಕ್ಕಂಥ ಕಾಯಿಲೆ ಎಂದು ಕೇಳಿದ್ದೇವೆ. ಇದನ್ನು ಏನಾದರೂ ಕುಡಿದುಬಿಟ್ಟರೆ ಅಷ್ಟೆ. ಇವರು ಎಲ್ಲಾ ಕುಡಿಸುವುದಕ್ಕೆ ಹೊರಟಿರುವುದು ಯಾರಿಗೆ? ಪಾಪದವರು ಇದ್ದಾರಲ್ಲಾ, ಅವರಿಗೆ ಕುಡಿಸುವುದಕ್ಕೆ ಹೊರಟಿದ್ದಾರೆ. ಇವರು ಕುಡಿಸಿಕೊಳ್ಳಲಿ ನಾನು ಬೇಡ ಎನ್ನುವುದಿಲ್ಲ. ಆದರೆ ಪ್ರೂವ್ ಆಗಿದೆಯಾ? ಆ ಬ್ಯಾಕ್ಟೀರಿಯಾ ಮನುಷ್ಯನಿಗೆ ತಗಲುವುದಿಲ್ಲ ಎಂಬ ಬಗ್ಗೆ ಸೈಂಟಫಿಕ್ ಆಗಿ ಪ್ರೂವ್ ಆಗಿ ಅವರಿಗೆ ಏನೂ ತೊಂದರೆಯಾಗುವುದಿಲ್ಲವೆಂದು ಹೇಳಿದರೆ ಅದನ್ನು ಒಪ್ಪಿಕೊಳ್ಳಬಹುದು. ಆ ಮುಗ್ಧ ಜನರ

ಮೇಲೆ ಎಕ್ಸ್‌ಪೆರಿಮೆಂಟ್ ಮಾಡುವುದಕ್ಕೆ ಹೊರಟಿದ್ದಾರೆ. ಇದರ ಬಗ್ಗೆ ನಮಗೇನಾದರೂ ಅನುಭವ ಇದೆಯಾ? ನಾವು ಕುಡಿದಿದ್ದೇವಾ? ನಮ್ಮ ಹೆಂಗಸರು ಕುಡಿದಿದ್ದಾರಾ? ನಮ್ಮ ಮಕ್ಕಳು ಕುಡಿದಿದ್ದಾರಾ? ಅವರಿಗೆ ಮೊದಲು ಕುಡಿಸುವುದಕ್ಕೆ ಇವರು ಹೊರಟಿದ್ದಾರೆ. ಅದಕ್ಕೆ ನಿಮಗೆ ಅನುಭವ ಇದೆಯಾ ಹೇಳಿ ಎಂದು ಹೇಳಿದೆ. ನಾನು ಖಂಡಿತವಾಗಿ ಹೇಳುತ್ತೇನೆ, ದೇಶಕ್ಕಾಗಿ ಯಾರು ದುಡಿಯುತ್ತಾರೆ, ಯಾರು ಕೂಲಿ ಕೆಲಸ ಮಾಡುತ್ತಾರೋ, ಈ ದೇಶದ ಅಣುಅಣುವಿನಲ್ಲಿ ಅವರ ಬೆವರು ಸೇರಿದೆ, ಅಂತಹವರಿಗೆ ಇಲ್ಲಿ ಕುಳಿತುಕೊಂಡು ನಾವು ನಾಲ್ಕು ಜನ ಕುಡಿಯಿರಿ ಎಂದು ನಾವು ಅದನ್ನು ಕುಡಿದಿದ್ದೇವಾ ಅಥವಾ ನಮ್ಮ ಹೆಂಡತಿ ಮಕ್ಕಳಿಗೆ ಕುಡಿಸಿದ್ದೇವಾ? ನಾವು ಇದ್ಯಾವುದನ್ನು ಮಾಡದೇ ಅವರಿಗೆ ಕುಡಿಸಿದರೆ ಇದಕ್ಕಿಂತ ಪಾಪದ ಕೆಲಸ ಇನ್ನೊಂದಿಲ್ಲ. ಇದು ಸೈಂಟಿಫಿಕ್ ಆಗಿ ಪ್ರೂವ್ ಆಗಿದ್ದರೆ ನೀವು ಮಾಡಿ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಮಾನ್ಯ ಹನುಮೇಗೌಡರು ನೀರಾ ಬಗ್ಗೆ ಕೇಳಿದರು. ನೀರಾ ಸಾರಾಯಿ ಅಷ್ಟು ಹಾನಿಕಾರವಲ್ಲವೆಂಬುದು ಸರ್ವವೇದ್ಯವಾಗಿರತಕ್ಕಂಥ ವಿಚಾರ.

ಶ್ರೀ ಕಾಗೋಡು ತಿಮ್ಮಪ್ಪ: ಹಾಗಾದರೆ ಎಲ್ಲರೂ ಕೂಡ ಕುಡಿಯಬೇಕೆಂದು ಕಂಪಲ್ಸರಿ ಮಾಡಿಬಿಡಿ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ತಾವು ಸಾರಾಯಿ ವಿಚಾರದಲ್ಲಿ ಹೇಳುವುದಾದರೆ ನಮ್ಮ ಕಡೆ ಆಕ್ಷನ್ ಬಿಡ್ ಮಾಡಿದಿರಿ. ನಮ್ಮ ಗುಂಡ್ಲುಪೇಟೆಯಲ್ಲಿ ಇಪ್ಪತ್ತು ಲಕ್ಷ ರೂಪಾಯಿಗೆ ತೆಗೆದುಕೊಳ್ಳುವುದು ಕಷ್ಟ. ಮೂರು ಸಲ ಅದನ್ನು ರೀ-ಆಕ್ಷನ್ ಮಾಡಿ, ಬೆಂಗಳೂರಿನಲ್ಲಿ ಕರೆದು 47 ಲಕ್ಷ ರೂಪಾಯಿಗಳಿಗೆ ತೆಗೆದುಕೊಳ್ಳಲೇಬೇಕೆಂದು ಸರ್ಕಾರ ಒತ್ತಾಯ ಮಾಡುವಂತಹ ಪ್ರಮೇಯ ಏನಿತ್ತು? ಎಂದರೆ ಹೆಚ್ಚಾಗಿ ಸಾರಾಯಿ ಕುಡಿಯಿರಿ ಎಂದು ಹೇಳುವುದು. ನಮ್ಮ ತಾಲ್ಲೂಕಿನಲ್ಲಿ 15 ರಿಂದ 20 ಲಕ್ಷ ರೂಪಾಯಿಗಳ ಮೇಲೆ ಆಕ್ಷನ್ ಆಗುವುದಕ್ಕೆ ಚಾನ್ಸ್ ಇಲ್ಲ. ಅಂತಹ ಸಂದರ್ಭದಲ್ಲಿ ತಾವು 10 ರಿಂದ 20 ಪರ್ಸೆಂಟ್ ಏರಿಸಿ ಎಂದು ಅವರಿಗೆ ಬೆನ್ನು ತಟ್ಟಿ ನಮ್ಮ ಜಿಲ್ಲಾಧಿಕಾರಿಗಳು ವಾರಕ್ಕೆ ನಾಲ್ಕು ಬಾರಿ ಬಂದು ಬೆಂಗಳೂರಿನಲ್ಲಿ ಆಕ್ಷನ್‌ನಲ್ಲಿ ಭಾಗವಹಿಸಬೇಕಾಗಿ ಬಂತು. ಹಾಗಾಗಿ ನಾವು ಜನರನ್ನು ಫೋರ್ಸ್ ಮಾಡಿ ಅವರಿಗೆ ಕುಡಿಸಿ ಕುಡುಕರನ್ನಾಗಿ ಮಾಡಿ ಎಂದು ಹೇಳುತ್ತಿಲ್ಲ. ನಾವು ತೆಂಗು ಬೆಳೆಗಾರರ ಸಮಸ್ಯೆ ಏನಿದೆ ಅದಕ್ಕೆ ಪರಿಹಾರವನ್ನು ಹುಡುಕುತ್ತಿದ್ದೇವೆ. ಹಾಗೂ ಬೇರೆ ಪರಿಹಾರವನ್ನು ಹೇಳುತ್ತಿದ್ದೇವೆ. ಬ್ಯಾಕ್ಟೀರಿಯಾ ಬರುತ್ತದೆಂದು ಮಾನ್ಯ ಹನುಮೇಗೌಡರು ಹೇಳಿದರು. ಆ ಬ್ಯಾಕ್ಟೀರಿಯಾ ಹೊಂಬಾಳೆಯಿಂದ ಆಚೆ ಕಡಿಯತಕ್ಕಂಥ ಕಾಯಿನ ಕಾಪಿನ ಸಂದಿಗೆ ಬಂದು ಸೇರುವುದು. ಆ ಹೊಂಬಾಳೆ ಅಷ್ಟೇ ಕಟ್ ಮಾಡಿದಾಗ ಆ ಬ್ಯಾಕ್ಟೀರಿಯ ಮರಕ್ಕೆ ಬರುವ ಪ್ರಶ್ನೆನೇ ಇರುವುದಿಲ್ಲ. ಹಾಗಾಗಿ ನಾವು ಅದಕ್ಕೆ ಮಡಕೆ ಕಟ್ಟಿ, ನೀರಾ ಇಳಿಸುವ ಪ್ರಯತ್ನವನ್ನು ಮಾಡಬಹುದು. ಹಾಗಾಗಿ ಆ ಬ್ಯಾಕ್ಟೀರಿಯಕ್ಕೂ ಈ ನೀರಾ ಇಳಿಸುವುದಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ. ನೀರಾವನ್ನು ನಾನು 15-20 ವರ್ಷದ ಹಿಂದೆ ಕುಡಿದಿದ್ದೇನೆ. ಬೆಳಗಿನ ಜಾವ ಆರು ಗಂಟೆ ಒಳಗೆ

ನೀರಾ ಕುಡಿದರೆ ಆರೋಗ್ಯಕ್ಕೆ ಒಳ್ಳೆಯದೆಂದು ನಮ್ಮ ಊರಿನಲ್ಲಿ ತೆಂಗಿನ ಮರಕ್ಕೆ ಕಟ್ಟ ಸೇಂದಿ ಇಳಿಸುವಂತಹ ಕಾಲದಲ್ಲಿ ಕೊಡುತ್ತಿದ್ದರು. ಇದನ್ನು ಬೆಳಗಿನ ಜಾವ ನಾಲ್ಕೂವರೆಯಿಂದ ಐದು ಗಂಟೆಯಲ್ಲಿ, ಅದಕ್ಕೆ ದ್ರಾಕ್ಷಿ, ಗೋಡಂಬಿ ಹಾಗೂ ಕಲ್ಲುಸಕ್ಕರೆ ಎಲ್ಲವನ್ನೂ ಹಾಕಿ ಮಡಕೆಯನ್ನು ಚೆನ್ನಾಗಿ ತೊಳೆದು ಕಟ್ಟ ಅದರಲ್ಲಿ ಇಳಿಸಿ, ಅದನ್ನು ಕುಡಿದರೆ ಆರೋಗ್ಯಕ್ಕೆ ಬಹಳ ಒಳ್ಳೆಯದೆಂದು ಒಂದು ಪದ್ಧತಿ ಇದೆ. ಮಾನ್ಯ ಹನುಮೇಗೌಡರು ಚಾಮರಾಜನಗರಕ್ಕೆ ಬಂದರೆ ಆ ನೀರಾ ಸೇವೆಯನ್ನೂ ಕೂಡ ಮಾಡಿಸುತ್ತೇನೆ. ಅದರ ಬಗ್ಗೆ ನನ್ನದು ಒಂದೆರಡು ಸಲಹೆ ಇದೆ.

ಶ್ರೀ ಬಿ.ಸೋಮಶೇಖರ್: ಅವರು ಅಧ್ಯಯನ ಮಾಡಿಕೊಂಡು ಬಂದಿದ್ದಾರೆ. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಇನ್ನು ನನ್ನದು ಒಂದೆರಡು ಸಲಹೆ ಇದೆ. ಸರ್ಕಾರದವರು ಮೂರು ಹಂತಗಳಲ್ಲಿ ಔಷಧವನ್ನು ಕೊಡುತ್ತಿದ್ದಾರೆ. ಒಂದು ಔಷಧ 8 ರಿಂದ 10 ರೂಪಾಯಿ ಸಬ್ಸಿಡಿ ಎಂದು ಹೇಳಿ ಬೇರಿಗೆ ಕೊಡತಕ್ಕಂಥಾದ್ದು, ಒಂದು ಗೆಡ್ಡೆಗೆ ಹಾಕತಕ್ಕಂಥಾದ್ದು ಇನ್ನೊಂದು ಬೇವಿನಹಿಂಡಿ ಎಂದು ಅದನ್ನು ಗಿಡದ ಸುತ್ತ ಹಾಕಬೇಕೆಂದು ಹೇಳಿ ಮೂರು ಹಂತದಲ್ಲಿ ಔಷಧವನ್ನು ಕೊಡುತ್ತಾರೆ. ಇದಕ್ಕೆ ಏನೇನು ರೂಲ್ಸ್ ಮಾಡಿದ್ದಾರೆಂದರೆ ಯಾವ ರೈತ ತೆಂಗು ಬೆಳೆಯುತ್ತಾನೆ ಅವನು ಆರ್‌ಟಿಸಿ ತೆಗೆದುಕೊಳ್ಳಬೇಕು. ನಂತರ ತೋಟಗಾರಿಕಾ ಇಲಾಖೆಯಿಂದ ಪರ್ಮಿಟ್ ತೆಗೆದುಕೊಳ್ಳಬೇಕು. ನಂತರ ಮಾರ್ಕೆಟ್ ಮಾಡುವುದಕ್ಕೆ ಒಂದು ಏಜೆನ್ಸಿ ನೇಮಿಸಿದ್ದಾರೆ, ಅವನು ಯಾವತ್ತು ಊರಿಗೆ ಬರುತ್ತಾನೆ. ಅವನ ಹತ್ತಿರ ಹೋಗಿ ಆರ್‌ಟಿಸಿ, ಪರ್ಮಿಟ್ ಎಲ್ಲಾ ತೋರಿಸಿ ಅಲ್ಲಿ ಔಷಧವನ್ನು ತೆಗೆದುಕೊಳ್ಳಬೇಕು. ನೀವೇನು 50 ಪರ್ಸೆಂಟ್ ಸಬ್ಸಿಡಿ ಕೊಡುತ್ತೀರಿ, ಆ ದುಡ್ಡು ಆ ಆರ್‌ಟಿಸಿ ಹಾಗೂ ಪರ್ಮಿಟ್ ತೆಗೆದುಕೊಳ್ಳುವುದಕ್ಕೆ ಏನು ಓಡಾಡುತ್ತಾನೆ ಅದಕ್ಕೆ ಖರ್ಚಾಗಿ ಹೋಗುತ್ತದೆ. ಹಾಗಾಗಿ ಇದರ ಬಗ್ಗೆ ರೈತರು ಯಾರೂ ಆಸಕ್ತಿ ತೋರಿಸುತ್ತಿಲ್ಲ. ನೀವು ಬೇಕಾದರೆ ಪ್ರಾಮಾಣಿಕವಾಗಿ ಸರ್ವೇಕ್ಷೆ ಮಾಡಿ, ರಾಜ್ಯದಲ್ಲಿ ನಿಮ್ಮ ಈ ಯೋಜನೆ ಬಗ್ಗೆ ರೈತರಲ್ಲಿ ಆಸಕ್ತಿನೇ ಇಲ್ಲ. ಯಾರೇ ಆಗಲಿ ಈ ಔಷಧವನ್ನು ತೆಗೆದುಕೊಳ್ಳಬೇಕು, ಹಾಕಬೇಕು ಎನ್ನುವ ಒಂದು ತೀರ್ಮಾನದಿಂದ ಬೇಸತ್ತು ಹೊರಗೆ ಬಂದಿದ್ದಾರೆ. ಈಗ ಪ್ರತಿದಿನ ಪತ್ರಿಕೆಗಳಲ್ಲಿ ನೋಡುತ್ತಿದ್ದೀರಿ. ಒಂದೊಂದು ಕಡೆ ನೀರಾ ಇಳಿಸತಕ್ಕಂಥ ಕಾರ್ಯಕ್ರಮಗಳು ಅಲ್ಲಲ್ಲಿ ನಡೆಯುತ್ತಿವೆ. ನಿನ್ನೆ ಮಾನ್ಯ ಚಂದ್ರೇಗೌಡರು ಒಂದು ಮಾತನ್ನು ಮಾನ್ಯ ಕೃಷ್ಣಮೂರ್ತಿಯವರು ಮಾತನಾಡುವಾಗ ಹೇಳಿದರು. ಯಾವುದೋ ಒಂದು ಪ್ರೈವೇಟ್ ಏಜನ್ಸಿಯವರು ಬಂದು ಒಂದು ಮರಕ್ಕೆ 15 ರೂಪಾಯಿಗೆ ಔಷಧ ಕಟ್ಟ ಪ್ರಯೋಗ ಮಾಡುತ್ತಾರೆ, ಅದರಿಂದ ನುಸಿರೋಗ ಹೋಗುತ್ತದೆಂದು ತಿಳಿಸಿದರು. ಈಗ ಅಲ್ಲಿ ಪ್ರಯತ್ನಗಳು ನಡೆಯುತ್ತಿರಬಹುದು. ಆದರೆ ನಮ್ಮಲ್ಲಿ ಈ ಒಂದು ಪ್ರಯತ್ನ ಆಗಿಹೋಗಿದೆ. ಒಂದು ಪಕ್ಷ ಪ್ರೈವೇಟ್ ಏಜೆನ್ಸಿಯವರೇನಾದರೂ ಈ ರಾಜ್ಯದಲ್ಲಿ ಸರ್ವವ್ಯಾಪಿಯಾಗಿ ಕೆಲಸ ಕೈಗೊಂಡು ನುಸಿರೋಗ ಹೋಗಿಸುತ್ತೇವೆಂದು ಹೇಳಿದಾಗ ಅವರಿಗೆ ಕೊಟ್ಟರೂ ಚಿಂತೆ ಇಲ್ಲ.

ಆದರೆ ಒಂದು ಅಗ್ರಿಮೆಂಟ್ ಮಾಡಿಕೊಳ್ಳಬೇಕಾಗುತ್ತದೆ. ಒಂದು ವರ್ಷ ಯಾವುದೇ ಕಾರಣಕ್ಕೂ ಮತ್ತೆ ಈ ನುಸಿ ರೋಗ ಬರಬಾರದು ಎಂದು ಗ್ಯಾರಂಟಿ ಕೊಡುವುದಾದರೆ, ರಾಜ್ಯ ಸರ್ಕಾರ ಆ ಒಂದು ಪ್ರಯತ್ನ ಮಾಡಬಹುದೆಂದು ಹೇಳುತ್ತಾ, ಡ್ರಿಪ್ ಇರಿಗೇಷನ್ ರೈತರಿಗೆ ಬಹಳ ಅವಶ್ಯಕತೆ ಇರುವಂತಹ ಒಂದು ವಿಚಾರವಿದೆ. ಇವತ್ತು ಬರಗಾಲದಲ್ಲಿ ತೆಂಗು ಒಂದು ಆಶಾದಾಯಕವಾದ ಬೆಳೆ. ನೀರಾವರಿ ಇರುವಂತಹವರಿಗೆ ಇದರ ಬಗ್ಗೆ ಚಿಂತೆ ಇಲ್ಲ. ಏಕೆಂದರೆ ನೀರಾವರಿ ಪ್ರದೇಶದಲ್ಲಿ ಇರುವವರಿಗೆ ತೆಂಗಿನ ಬೆಳೆಯ ನುಸಿ ರೋಗದ ಬಗ್ಗೆ ಆಲೋಚನೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ ಅವರಿಗೆ ಇದರ ಕಷ್ಟ ಏನೆಂಬುದು ಅರ್ಥವಾಗುವುದಿಲ್ಲ. ಬಯಲು ಪ್ರದೇಶದಲ್ಲಿ ಇರುವವರಿಗೆ ನೀರಾವರಿ ಯೋಜನೆ ಇಲ್ಲದೆ ಇರುವಂತಹ ತಾಲ್ಲೂಕುಗಳಲ್ಲಿ ನಾವು ತೆಂಗಿನ ಬೆಳೆಯಿಂದ ಅಷ್ಟು, ಇಷ್ಟು ವರಮಾನ ಕಾಣುತ್ತಿದ್ದೇವೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಹನಿ ನೀರಾವರಿ ಯೋಜನೆಯಲ್ಲಿ ಸಾಮಾನ್ಯ ವರ್ಗದವರಿಗೆ 70 ಪರ್ಸೆಂಟ್ ಹಾಗೂ ಎಸ್‌ಸಿ/ಎಸ್‌ಟಿ ವರ್ಗದವರಿಗೆ 90 ಪರ್ಸೆಂಟ್ ಸಬ್ಸಿಡಿಯನ್ನು ಮೊದಲು ಕೊಟ್ಟರಿ. ಆದರೆ ಅದನ್ನು ಈಗ ಜನರಲ್‌ನವರಿಗೆ 35 ಪರ್ಸೆಂಟ್ ಹಾಗೂ ಎಸ್‌ಸಿ/ಎಸ್‌ಟಿಯವರಿಗೆ 50 ಪರ್ಸೆಂಟ್ ಸಬ್ಸಿಡಿ ಮಾಡಿದಿರಿ. ಆದುದರಿಂದ ಈಗ ಎಲ್ಲರೂ ಡ್ರಿಪ್ ಹಾಕಿಸುವುದನ್ನು ನಿಲ್ಲಿಸಿಬಿಟ್ಟರು. ಈಗ ನೀರಿನ ಅಭಾವವಿದ್ದು, ಅಂಥಾದ್ದರಲ್ಲಿ ಕೂಡ ತಾವು ಡ್ರಿಪ್‌ಗೂ ಸಹ ಶೇ.90ರಷ್ಟು ಸಬ್ಸಿಡಿ ಎಂದು ಹಿಂದೆ ಏನು ಇತ್ತು ಇದರಲ್ಲಿ ಎಸ್‌ಸಿ/ಎಸ್‌ಟಿ, ಹಾಗೂ ಜನರಲ್ ಎಂದು ವರ್ಗೀಕರಣವನ್ನು ಮಾಡುವುದನ್ನು ಬಿಡಿ. ಇಲ್ಲಿ ರೈತರ ವಿಚಾರವಾಗಿ ರೈತರು ಎಂದು ನೋಡಿ, ನೀವು ಈ ಶೇ.90ರಷ್ಟು ಸಬ್ಸಿಡಿ ಏನಿದೆ, ಅದರಲ್ಲಿ ಹನಿ ನೀರಾವರಿಗೆ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ನಮ್ಮ ಚಾಮರಾಜ ನಗರ ಜಿಲ್ಲೆಯಲ್ಲಿ 15 ಸಾವಿರ ಹೆಕ್ಟೇರ್ ಭೂಮಿಯಲ್ಲಿ ತೆಂಗನ್ನು ಬೆಳೆಯುತ್ತಿದ್ದಾರೆ. ಸುಮಾರು 18 ಲಕ್ಷ ತೆಂಗಿನ ಮರಗಳನ್ನು ಬೆಳೆದಿದ್ದಾರೆ. ಸುಮಾರು 40 ಸಾವಿರ ಜನ ರೈತರು ಈ ತೆಂಗಿನ ಬೆಳೆಯನ್ನು ಅವಲಂಬಿಸಿಕೊಂಡು ಜೀವನವನ್ನು ನಡೆಸುತ್ತಿದ್ದಾರೆ. ಈ ಬೆಳೆಯಿಂದ ಒಳ್ಳೆಯದಾಗುತ್ತದೆಂದು ತೆಂಗನ್ನು ಹಾಕುತ್ತಾರೆ, ಇದನ್ನು ಬಿಟ್ಟು ಬೇರೆ ಯಾವುದೇ ಬೆಳೆಯನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಈ ರೀತಿಯಾಗಿ ತೆಂಗು ಬೆಳೆ ಕೈಬಿಟ್ಟು ಹೋದಾಗ ಇದರ ನೆರಳಿನಲ್ಲಿ ಬೇರೆ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ರೈತರು ಎಲ್ಲಿಗೆ ಹೋಗಬೇಕು? ಇದೊಂದು ಸಮಸ್ಯೆಯಾಗಿ ರೈತರನ್ನು ಇವತ್ತು ಕಾಡುತ್ತಿದೆ. ಈಗ ಸರ್ಕಾರವೂ ಔಷಧವನ್ನು ಸಿಂಪಡಿಸಬೇಕೆಂದು ಪ್ರಚಾರ ಮಾಡುತ್ತಿದೆಯೇ ಹೊರತು ಇದಕ್ಕೆ ಏನಾದರೂ ಮಾರ್ಗೋಪಾಯಗಳು ಇದೆಯೇ ಎಂಬುದನ್ನು ಕಂಡು ಹಿಡಿಯುವಂತಹ ಪ್ರಯತ್ನವನ್ನು ಮಾಡುತ್ತಿದೆಯೆಂದು ನನಗನ್ನಿಸುವುದಿಲ್ಲ. ಇದೇ ರೀತಿಯಲ್ಲಿ ಹಿಂದೆ ಸದನದಲ್ಲಿ ತೊಗರಿ ಬೇಳೆ ವಿಫಲವಾದಾಗ, ಮತ್ತೆ ರೈತರು ಆತ್ಮಹತ್ಯೆಯನ್ನು ಮಾಡಿಕೊಂಡಂತಹ ಸಂದರ್ಭದಲ್ಲಿ, ಇದೇ ಶಾಸನ ಸಭೆಯಲ್ಲಿ ಜಂಟಿ ಸದನ ಸಮಿತಿಯನ್ನು ಮಾಡಿ, ಈ ಸಮಿತಿಯೂ ಅಕ್ಕಪಕ್ಕದ ರಾಜ್ಯಗಳಿಗೆ ಹೋಗಿ ಅಲ್ಲಿನ ರೈತರು ಯಾವ ರೀತಿಯಲ್ಲಿ ಬೆಳೆಯುತ್ತಾರೆ, ಯಾವ ರೀತಿಯಲ್ಲಿ ಫೈಲ್ಯೂರ್ ಆಗಿದೆ ಎಂಬ ಬಗ್ಗೆ ಜಂಟಿ ಸದನ ಸಮಿತಿಯೂ ಪರೀಕ್ಷೆ ಮಾಡಿಕೊಂಡು ಬಂದು ಅದರ

ವರದಿಯನ್ನು ಕೊಟ್ಟಿದ್ದಾರೆ. ನಾವೂ ಕೂಡ ಆ ಸಮಿತಿಯಲ್ಲಿ ಇದ್ದೆವು, ಈಗ ಇಷ್ಟೆಲ್ಲಾ ಆಗಿದ್ದರೂ ಕೂಡ, ನಮ್ಮ ಅನೇಕ ಜನ ಶಾಸಕರೇ ನೀರಾ ಕುಡಿಯುತ್ತಿರುವುದನ್ನು ಹಾಗೂ ಇದಕ್ಕೆ ಬೆಂಬಲವನ್ನು ಸೂಚಿಸಿರುವುದನ್ನು ನೋಡಿದ್ದೀರಿ. ಈ ಒಂದು ಸಂದರ್ಭದಲ್ಲಿ ಶಾಸಕರನ್ನೊಳಗೊಂಡ ಸದನ ಸಮಿತಿಯನ್ನು ಮಾಡಿ ಪಕ್ಕದ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರ, ಈ ನಾಲ್ಕು ರಾಜ್ಯಗಳಲ್ಲಿ ಈ ನುಸಿ ರೋಗವನ್ನು ತಡೆಗಟ್ಟುವಂಥಾದ್ದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ, ಇಲ್ಲಿ ರೈತರ ಸಮಸ್ಯೆ ಏನಿದೆ, ರೈತರು ಯಾವ ರೀತಿಯಲ್ಲಿ ಸರ್ಕಾರದವರು ಈ ರೋಗಕ್ಕೆ ಹಾಕಿರುವಂತಹ ಕಾರ್ಯಕ್ರಮಗಳಿಗೆ ಸ್ಪಂದಿಸುತ್ತಿದ್ದಾರೆಂಬ ಬಗ್ಗೆ ಈ ರಾಜ್ಯಗಳಿಗೆ ಕಳುಹಿಸಿ ತಿಳಿದುಕೊಳ್ಳುವಂತಹ ಪ್ರಯತ್ನವನ್ನು ಕಳೆದ ಒಂದು ವರ್ಷದಿಂದಲೂ ಮಾಡಲಿಲ್ಲ, ಹಾಗಾಗಿ ಇವತ್ತು ರೈತರು ರೊಚ್ಚಿಗೆದ್ದಿದ್ದಾರೆ. ತೆಂಗು ಬೆಳೆ ಇರುವಂತಹ ಪ್ರದೇಶಗಳಲ್ಲಿ ಶಾಸಕರು ಅವರ ಮನೆಗಳಲ್ಲಿ ಮಲಗುವುದಕ್ಕೆ ಆಗದಿರುವಂತಹ ಪರಿಸ್ಥಿತಿಯಲ್ಲಿ ಇವತ್ತು ರೈತರು ಲಗ್ಗೆ ಹಾಕುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ನಾವು ಊರಿಗೆ ಹೋಗಿ ಸರ್ಕಾರದ ನಿಲುವು ಏನೆಂಬುದನ್ನು ಹೇಳದೇ ಹೋದರೆ ನಮ್ಮ ಪರಿಸ್ಥಿತಿ ಏನಾಗಬೇಕು? ಇವತ್ತಿನ ಇಂತಹ ಒಂದು ಪರಿಸ್ಥಿತಿಯಲ್ಲಿ ನಾವು ಬಹಳ ಹೋರಾಟ ಮಾಡಿ ಈ ವಿಷಯವನ್ನು ಚರ್ಚೆ ಮಾಡುವಂಥಾದ್ದಕ್ಕೆ ಅವಕಾಶವನ್ನು ಪಡೆದುಕೊಂಡಿದ್ದೇವೆ. ನಾವು ಇದಕ್ಕೆ ಸರ್ಕಾರದಿಂದ ಉತ್ತರವನ್ನು ಪಡೆಯದೇ ಸಭೆಯನ್ನು ಮುಕ್ತಾಯ ಮಾಡಿ ಊರಿಗೆ ಹೋದರೆ ಬಹಳ ತೊಂದರೆಯಾಗುತ್ತದೆ. ಆ ಕಾರಣದಿಂದ ಸರ್ಕಾರ ಇದನ್ನು ಗಂಭೀರವಾಗಿ ಯೋಚನೆ ಮಾಡಿ, ಮೊದಲನೆಯದಾಗಿ ನೀರಾ ಇಳಿಸುವಂಥಾದ್ದಕ್ಕೆ ಅನುಮತಿಯನ್ನು ಕೊಡುವಂಥಾದ್ದು, ಮತ್ತೆ ಇದರ ಸಾಧಕಭಾದಕಗಳು, ಆಗುಹೋಗುಗಳ ಬಗ್ಗೆ ಸದನ ಸಮಿತಿ ಮಾಡಿ ಚರ್ಚೆ ಮಾಡಿಸಿ. ಅದೇ ರೀತಿ ಈ ನುಸಿರೋಗದ ಬಗ್ಗೆ ಬೇರೆ ರಾಜ್ಯಗಳು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಂಬ ಬಗ್ಗೆ ಒಂದು ವರದಿಯನ್ನು ತೆಗೆದುಕೊಂಡು, ಹಾಗೆಯೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು, ಮತ್ತೆ ಚಳುವಳಿಯಲ್ಲಿ ತೊಡಗಿರುವಂತಹ ರೈತರಿಗೆ ಒಂದು ಸ್ಪಷ್ಟವಾದಂತಹ ನಿರ್ದೇಶನವನ್ನು ಸರ್ಕಾರ ನೀಡಬೇಕು ರೈತರು ತೋಟದಲ್ಲಿ ನೀರಾ ಕಟ್ಟುತ್ತೇವೆ, ನೀವೇ ಮಡಿಕೆಯನ್ನು ಹಾಕಬೇಕೆಂದು ನಮ್ಮನ್ನು ಕರೆಯುತ್ತಾರೆ, ಇದಕ್ಕೆ ನಾವು ಹೋಗಬೇಕೋ ಬೇಡವೋ ಎನ್ನುವ ಪರಿಸ್ಥಿತಿ ಇದೆ. ಇವತ್ತಿನ ''ವಿಜಯ ಕರ್ನಾಟಕ'' ಪತ್ರಿಕೆ, ಇದು ಒಳ್ಳೆ ಲೀಡಿಂಗ್ ಪೇಪರ್ ಆಗಿದ್ದು, ಇದರಲ್ಲಿ ಚೆನ್ನಪಟ್ಟಣ ತಾಲ್ಲೂಕಿನಲ್ಲಿ ನೀರಾ ಮಾರಾಟದ ಭರಾಟೆ ಒಂದೊಂದು ಊರಿನಲ್ಲಿ ಒಂದು ಸಾವಿರ ಮರಕ್ಕೆ ಮಡಿಕೆ ಕಟ್ಟಿ ನೀರಾ ಇಳಿಸುತ್ತಿದ್ದಾರೆ. ಇದಕ್ಕೆ ಸಹಕಾರಿ ಸಚಿವರ ಬೆಂಬಲವಿದೆ, ಮಾನ್ಯ ಮುಖ್ಯಮಂತ್ರಿಯವರ ಬೆಂಬಲವಿದೆ ಎಂದು ಬಂದಿದೆ. ಇದನ್ನು ರೈತರು ಓದಿದರೆ ಅವರ ಮನಸ್ಸಿನ ಮೇಲೆ ಏನು ಪರಿಣಾಮ ಬೀರುತ್ತದೆ, ಅವರು ನಾವೂ ನೀರಾ ಇಳಿಸಲು ಮಡಿಕೆಯನ್ನು ಕಟ್ಟಬಹುದು, ಸರ್ಕಾರಕ್ಕೆ ಇದರ ಬಗ್ಗೆ ಉದಾಸೀನ ಭಾವನೆ ಇದೆಯೆಂದು ಹೇಳುತ್ತಾರೆ. ಆದುದರಿಂದ ಎಕ್ಸೈಜ್ ಆಕ್ಟ್‌ನಲ್ಲಿ ಏನಾದರೂ ತಿದ್ದುಪಡಿ ಮಾಡುವಂಥಾದ್ದು ಆಗಬೇಕು. ಈಗ ತಾವು 3-4 ಜಿಲ್ಲೆಗಳಲ್ಲಿ ಅಂದರೆ ಉತ್ತರ ಕನ್ನಡ, ದಕ್ಷಿಣ ಕನ್ನಡ, ಹಾಗೂ ಉಡುಪಿಯಲ್ಲಿ

ಅವಕಾಶವನ್ನು ಕೊಟ್ಟಿದ್ದೀರಿ. ಇದೇ ರೀತಿಯಲ್ಲಿ ತೆಂಗನ್ನು ಪ್ರಮುಖವಾಗಿ ಬೆಳೆಯುವಂತಹ ಜಿಲ್ಲೆಗಳು ಯಾವುದು ಇದೆ, ಅಲ್ಲಿ ಪ್ರಾಯೋಗಿಕವಾಗಿ ಇದನ್ನು ಮಾಡುವಂಥಾದ್ದಕ್ಕೆ ರೈತರು ಅಪೇಕ್ಷೆಪಡುತ್ತಾರೆ. ಇಲ್ಲಿ ರೈತನಿಗೆ ನಷ್ಟವಾಗುವುದಾದರೆ ಅದನ್ನು ಮಾಡುವುದೇ ನಿಲ್ಲಿಸಿ ಬಿಡುತ್ತಾನೆ. ಆದುದರಿಂದ ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚನೆ ಮಾಡಿ ಇದಕ್ಕೆ ಏನಾದರೂ ಪರಿಹಾರ ಮಾರ್ಗವನ್ನು ಕಂಡಿಹಿಡಿಯಬೇಕು, ಮತ್ತೆ ಈ ರೋಗ ತಡೆಯುವಂಥಾದ್ದಕ್ಕೆ ಪ್ರಯತ್ನ ಮಾಡಬೇಕು. ಇದು ಆಗದೇ ಹೋದರೆ ಅವರಿಗೆ ನೆರವು ಕೊಡುವಂಥಾದ್ದು ಆಗಬೇಕು. ಒಂದು ತೆಂಗಿನ ಮರಕ್ಕೆ ಇಷ್ಟು ಹಣವೆಂದು ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಒಂದು ಸದನ ಸಮಿತಿಯನ್ನು ಮಾಡಿ ಸುಧೀರ್ಘವಾಗಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಕಾನೂನು ವ್ಯವಸ್ಥೆ ಹದಗೆಡುತ್ತಿದೆ, ಪ್ರತಿ ತಾಲ್ಲೂಕು ಕೇಂದ್ರಗಳಲ್ಲೂ ರಸ್ತೆ ತಡೆ ನಡೆಯುತ್ತಿದೆ, ಮತ್ತೆ ಡಿ.ಸಿ.ಯವರ ಕಚೇರಿಗಳಿಗೆ ಮುತ್ತಿಗೆ ಹಾಕುತ್ತಿದ್ದಾರೆ. ಎಕ್ಸೈಜ್ ಡಿಪಾರ್ಟ್‌ಮೆಂಟ್‌ನವರು ಅರ್ಯಾಕ್ ಕಂಟ್ರಾಕ್ಟ್‌ದಾರರ ಜೀಪ್‌ಗಳನ್ನು ತೆಗೆದುಕೊಂಡು ರೈತರ ಮೇಲೆ ಧಾಳಿ ಮಾಡುತ್ತಿದ್ದಾರೆ, ಮತ್ತೆ ''ಸ್ತ್ರೀ ಶಕ್ತಿ'' ಬಗ್ಗೆ ಎಲ್ಲರೂ ಮೆಚ್ಚುಗೆಯನ್ನು ವ್ಯಕ್ತಪಡಿಸಿದಂಥಾದ್ದು, ಈ ಸಂಘಗಳು ಎಲ್ಲೆಲ್ಲಿ ಇದೆಯೋ ಅವರು ಅರ್ಯಾಕ್ ಮಾರಾಟ ಎಲ್ಲಿ ನಡೆಯುತ್ತಿದೆ, ಅಲ್ಲಿಗೆ ಸಾವಿರಾರು ಸಂಖ್ಯೆಯಲ್ಲಿ ಸಮರೋಪಾದಿಯಲ್ಲಿ ಬಂದು ಇದನ್ನು ತಡೆಗಟ್ಟುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ. ಈ ಎಲ್ಲಾ ಸಮಸ್ಯೆಗಳ ಹಿನ್ನಲೆ ಇರುವ ಸಂದರ್ಭದಲ್ಲಿ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ಇದಕ್ಕೆ ಸದನದಲ್ಲಿ ಸರಿಯಾದಂತಹ ಉತ್ತರವನ್ನು ಕೊಟ್ಟು, ಈ ರೈತರಿಗೆ ನೆರವು ನೀಡಬೇಕೆಂದು ಹೇಳಿ, ತಮಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಚೇರ್‌ಮನ್: ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2.00 ಗಂಟೆಗೆ ಮುಂದೂಡಿ ಮತ್ತೆ ಮೂರು ಘಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸದನವು ಮಧ್ಯಾಹ್ನ 3 ಗಂಟೆ 20 ನಿಮಿಷಕ್ಕೆ ಪ್ರಾರಂಭವಾಯಿತು)

(ಸಭಾಧ್ಯಕ್ಷ ಶ್ರೀ ಎಂ.ವಿ.ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

ನಿಯಮ 69ರ ಮೇಲೆಗೆ ರಾಜ್ಯದಲ್ಲಿ ತೆಂಗಿನ ಮರಗಳಿಂದ ನೀರಾ ಇಳಿಸಲು ಅನುಮತಿ ನೀಡುವ ಬಗ್ಗೆ.

ಮುಂದುವರಿದ ಚರ್ಚೆ

ಶ್ರೀ ಕೆ.ಎಂ.ಕೃಷ್ಣಮೂರ್ತಿ(ಕಡೂರು): ಸನ್ಮಾನ್ಯ ಅಧ್ಯಕ್ಷರೇ, ರೈತರ ಸಂಕಷ್ಟ ತಮಗೆ ಗೊತ್ತಿರುವುದರಿಂದ ಈ ಸದನದಲ್ಲಿ ನೀರಾ ಇಳಿಸುವ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದಿಸುತ್ತೇನೆ. ಕರ್ನಾಟಕದ 12 ಜಿಲ್ಲೆಗಳಲ್ಲಿ ತೆಂಗನ್ನು ಬೆಳೆದು, ಕಾಯಿ ಉತ್ಪಾದಿಸಿ ರಾಜ್ಯಕ್ಕೆ, ಹೊರ ರಾಜ್ಯಗಳಿಗೆ, ವಿದೇಶಗಳಿಗೆ ತೆಂಗಿನಕಾಯಿ ಮತ್ತು ಕೊಬ್ಬರಿಯನ್ನು ಕಳುಹಿಸುವ ಕೆಲಸವನ್ನು ಈ ನಾಡಿನ ರೈತರು ಮಾಡುತ್ತಿದ್ದಾರೆ. ಆ ತೋಟಗಾರಿಕಾ ಪದ್ಧತಿ ಇವತ್ತು ಬಂದಿದ್ದಲ್ಲ. ಆಗ ಈ ತೆಂಗು ಬೆಳೆಗೆ ರಾಜ್ಯದ 12 ಜಿಲ್ಲಾ ಪ್ರದೇಶಗಳಿಗೆ ಪ್ರಕೃತಿ ಹಾಗೂ ಸನ್ನಿವೇಶ ತುಂಬಾ ಚೆನ್ನಾಗಿತ್ತು. ನಮ್ಮಲ್ಲಿ ಒಬ್ಬ ವ್ಯಕ್ತಿಯನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಗುರುತಿಸಬೇಕಾದರೆ ಯಾರಾದರೊಬ್ಬ ವರ ಇದ್ದರೆ ಹೆಣ್ಣು ಕೊಡಬೇಕಾಗಿದ್ದರೆ, ಅವನು ಎಷ್ಟು ತೆಂಗಿನ ಗಿಡಗಳನ್ನು ಬೆಳಿಸಿದ್ದಾನೆಂದು ಜನರು ವಿಚಾರ ಮಾಡುತ್ತಿದ್ದರು. ನುಸಿ ರೋಗವಿಲ್ಲದಿದ್ದರೆ, ನೀರಾ ಇಳಿಸುವ ಸಮಸ್ಯೆಯೇ ಇರುತ್ತಿರಲಿಲ್ಲ. 1988ನೇ ಇಸವಿಯಲ್ಲಿ ಸೇಂದಿಯನ್ನು ಪ್ರಾಹಿಬಿಷನ್ ಮಾಡಿದ ಮೇಲೆ, ನೀರಾ ಮತ್ತು ಸೇಂದಿಯನ್ನು ಜನರು ಮರೆತಿದ್ದರು. ಉದಾಹರಣೆಗೆ ಈ ರಾಜ್ಯದ ಕೃಷಿ, ತೋಟಗಾರಿಕಾ ಸಚಿವರು ಮತ್ತು ನಾವು ಒಂದು ಸಾರಿ ತಮಿಳುನಾಡಿಗೆ ಹೋಗಿದ್ದಾಗ, ಬೆಳಿಗ್ಗೆ 6.00 ಗಂಟೆ ಸಮಯದಲ್ಲಿ 2-2 ಲೋಟ ನೀರಾ ಕುಡಿದಿದ್ದು ಅವರಿಗೆ ಜ್ಞಾಪಕಕ್ಕೆ ಬರಬಹುದು. 1967ನೇ ಇಸವಿಯಿಂದ ಅಬಕಾರಿ ಲಾಬಿ ಇದೆ, ಅಬಕಾರಿ ಲಾಬಿಯವರು ಬಹಳಷ್ಟು ದುಡಿಮೆ ಮಾಡಿ, ಜನರಿಗೆ ಸ್ಪಿರಿಟ್ ಅನ್ನು 30 ವರ್ಷಗಳಿಂದ ಕುಡಿಸಿಕೊಂಡು ಬಂದಿದ್ದಾರೆ. ಮಾನ್ಯ ಹನುಮೇಗೌಡರು, ಬಡವರಿಗೆ, ಪಾಪಿಗಳಿಗೆ ನೀವು ಅದನ್ನು ಕುಡಿಸಬೇಡಿ ಎಂದರು. ಸಮಸ್ಯೆ ಏನಿದೆಯೆಂದರೆ, 1969-70ನೇ ಇಸವಿಯಲ್ಲಿ ಸೇಂದಿ ಮಾಡುವವರು ತೆಂಗಿನ ಮರಗಳನ್ನು ಕೇಳುತ್ತಿದ್ದರು. ಆಗ ರೈತರು ಅದನ್ನು ಕೊಡಲಿಷ್ಟಪಡುತ್ತಿರಲಿಲ್ಲ. ಯಾರೋ ನನ್ನಂಥ ತೋಟವನ್ನು ಕೃಷಿ ಉಳುಮೆ ಮಾಡದವರು, ಆದಾಯ ಬರಲಿ, ತೋಟ ಕಾಯುವುದಕ್ಕಾಗದೆ ತೆಂಗಿನ ಕಾಯಿಗಳನ್ನು ಮನೆಗೆ ತೆಗೆದುಕೊಂಡು ಹೋಗಲಾಗುವುದಿಲ್ಲವೆನ್ನುವ ವ್ಯಕ್ತಿ ತೆಂಗಿನ ಮರಗಳನ್ನು ಸೇಂದಿ ಇಳಿಸಲು ಕೊಡುತ್ತಿದ್ದ. ಕೇರಳ ರಾಜ್ಯದಲ್ಲಿಯೂ ನುಸಿರೋಗ ಬಂದಿದ್ದು, ಅಲ್ಲಿ ನೀರಾ ಇಳಿಸಿದರು, ಸೊಸೈಟಿ ಮೂಲಕ ನೀರಾವನ್ನು ಮಾರಾಟ ಮಾಡಿರುವ ವಿಚಾರವನ್ನು ನಾನು ಈ ಸಭೆಯಲ್ಲಿ ಪ್ರಸ್ತಾಪಿಸಲಿಷ್ಟಪಡುತ್ತೇನೆ. ರೈತರ ಭಾವನೆಗಳನ್ನು ಕೃಷಿ ಮತ್ತು ತೋಟಗಾರಿಕಾ ಸಚಿವರಿಗೆ ನಾವು ತಿಳಿಸಬೇಕು. ನಾನೊಬ್ಬ ತೆಂಗು ಬೆಳೆಗಾರನಾಗಿ ವಿಚಾರವನ್ನು ಪ್ರಸ್ತಾಪಿಸುವುದಾದರೆ, ಒಂದು ತೆಂಗಿನ ಮರದಲ್ಲಿ 25 ಹಸಿರು ಗರಿಗಳು, ಎರಡು ಹಸಿರು ಎಡೆಮಟ್ಟೆ ಮಧ್ಯೆ ಹೊಂಬಾಳೆ ಬರುತ್ತದೆ. ಮುಂಗಾರಿನ 4, ಮಧ್ಯದ ಅವಧಿಯಲ್ಲಿನ 4, ಡಿಸೆಂಬರ್-ಜನವರಿ-ಫೆಬ್ರವರಿಯಲ್ಲಿ ಬರುವ 4 ಹೊಂಬಾಳೆ ಬರುತ್ತವೆ. ನುಸಿರೋಗ ಎಲ್ಲಿ

ಬರುತ್ತದೆ? ಅದು ತೆಂಗಿನ ಮರಕ್ಕೆ ಬರುವುದೇ ಇಲ್ಲ. ನುಸಿರೋಗ ಹೊಂಬಾಳೆಯಲ್ಲಿ ಉತ್ಪತ್ತಿಯಾಗುತ್ತದೆ ಮತ್ತು ಸಣ್ಣ ಸ್ಟೇಜ್‌ನಲ್ಲಿಯೇ ಅದನ್ನು ತಿನ್ನಲು ಪ್ರಾರಂಭಿಸುತ್ತದೆ. ಅದನ್ನು ಮಾನ್ಯ ಕೃಷಿ ಮತ್ತು ತೋಟಗಾರಿಕಾ ಸಚಿವರು ತಜ್ಞರಿಂದ ತಿಳಿದಿರಬಹುದು. ನಾನು ಕಳೆದ ವರ್ಷ ತೋಟಗಾರಿಕಾ ಸಚಿವರಿಗೆ ನುಸಿರೋಗದ ಕಾಯಿಯನ್ನು ತೋರಿಸಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಇತ್ತೀಚೆಗೆ ಚಿಕ್ಕಮಗಳೂರಿಗೆ ಬಂದಿದ್ದಾಗ, ನುಸಿರೋಗದ ಕಾಯಿ ಮತ್ತು ಕಪ್ಪುತಲೆ ಹುಳಗಳಿಂದಾಗಿರುವ ರೋಗದ ವಿಚಾರವನ್ನು ಪ್ರಸ್ತಾಪಿಸಿದ್ದೆ. ಇತ್ತೀಚೆಗೆ ಮಾನ್ಯ ಡಿ.ಬಿ.ಚಂದ್ರೇಗೌಡರು ಕಡೂರು ತಾಲ್ಲೂಕಿನಲ್ಲಿ ಬರ ಪ್ರವಾಸ ಮಾಡಿದ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರೇ, ಇವತ್ತು ನಮ್ಮ ಆರ್ಥಿಕ ಪರಿಸ್ಥಿತಿ ಕೆಟ್ಟದೆ, ನಾವು ಇಂದು ತೆಂಗಿನ ಮರಗಳನ್ನು, ತೆಂಗಿನ ಕಾಯಿಗಳನ್ನು ಕೆಡವುವ ಸ್ಥಿತಿಯಲ್ಲಿಲ್ಲ, ನೀವು ನೀರಾ ಇಳಿಸಲು ಅನುಮತಿ ಕೊಡಬೇಕೆಂದು ಹೇಳಿದರು. ಈ ವಿಚಾರವನ್ನೇಕೆ ನಾನು ಹೇಳುತ್ತಿದ್ದೇನೆಂದರೆ, ನೀರಾ ಇಳಿಸಬೇಕಾದರೆ ಯಾವುದೇ ಹೊಂಬಾಳೆಯನ್ನು ಬಿಡುವುದಿಲ್ಲ. ಇದನ್ನು ಮಾನ್ಯ ಹನುಮೇಗೌಡರು ಗಮನಿಸಬೇಕು. ನುಸಿ ಎಂದೇನು ನಾವು ಹೇಳುತ್ತೇವೆ. ಅದಕ್ಕೆ ಆಂಗ್ಲಭಾಷೆಯಲ್ಲಿ ಫಂಗೈ ಎನ್ನುತ್ತಾರೆ. ಅದು ಹೊಂಬಾಳೆ ಬಿಟ್ಟು ತೆಂಗಿನ ಮರದ ಇತರೆ ಭಾಗಗಳನ್ನು ಹಾಳು ಮಾಡುವುದಿಲ್ಲ. ಅದರಿಂದ ಯಾವುದೇ ಗಿಡಕ್ಕೆ ಹಾನಿಯಾಗುವುದಿಲ್ಲ. ಹೊಂಬಾಳೆ ಒಡೆದ ತಕ್ಷಣ ಹೂವು ಉದುರಿ ಕಾಯಿಯಾಗುವ ಸಣ್ಣ ಹಂತದಲ್ಲಿ ಒಂದು, ಒಂದೂವರೆ ತಿಂಗಳಲ್ಲಿ ನುಸಿರೋಗ ತಗುಲಿ ಡ್ರಾಪ್-ಔಟ್ ಆಗುತ್ತದೆ. ಅದು ಮುಂಗಾರು, ಹಿಂಗಾರು ಅಥವಾ ಗೌರಿ ಹಬ್ಬದ ಸೀಸನ್‌ನಲ್ಲಿ ಒಳ್ಳೆಯ ಫಸಲು ಕೊಡುವ ಹೊಂಬಾಳೆಯಲ್ಲೂ ಆಗುತ್ತದೆ. ಫಂಗೈ ಬಹಳ ಕಡಿಮೆ ಆವರಿಸಿಕೊಂಡು, ಅದು ಕಡಿಮೆ ಇದ್ದು, ಏನಾದರೂ ಉಳಿದರೆ ಇಂದು ಒಂದು ತೆಂಗಿನ ಮರದಲ್ಲಿ 25-30 ತೆಂಗಿನ ಕಾಯಿಗಳನ್ನು ನಾವು ತೆಗೆದುಕೊಳ್ಳಲು ಸಾಧ್ಯವಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತೋಟಗಾರಿಕಾ ಮತ್ತು ಕೃಷಿ ಸಚಿವರಿಗೆ ತಿಳಿಸಬಯಸುತ್ತೇನೆ. ನಾವು ನೀರಾವನ್ನು ಇಳಿಸಬೇಕು, ಈ ನೀರಾದಿಂದ ರೈತರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಸರ್ಕಾರ ಈ ಕ್ರಮವನ್ನು ಕೈಗೊಂಡರೆ, ಅವನಿಗೆ ನಾವು ಯಾವುದೇ ಪರಿಹಾರ ಕೊಡಬೇಕಾಗಿಲ್ಲ. ನುಸಿರೋಗ ಬಿದ್ದ ಸಂದರ್ಭದಲ್ಲಿ ಸರ್ಕಾರದವರು ಬಂದಂಥ ಬೆಳೆಗೆ ಸರಿಯಾದ ಬೆಲೆ ಕೊಡಲು ಸಾಧ್ಯವಾಗುತ್ತಿಲ್ಲ. ನಾವು ಸಬ್ಸಿಡಿಯನ್ನು ಕೇಳುತ್ತಿಲ್ಲ. ನಾವು ಬೆಂಬಲ ಬೆಲೆ ಕೇಳಿದ್ದೆವು. ಆದರೆ, ನೀವು ಅದನ್ನು ಕೊಬ್ಬರಿಗೆ ಕೊಟ್ಟರಿ. ಆದರೆ, ಅದು ಒಂದೇ ಜಿಲ್ಲೆಗೆ ಮಾತ್ರ ಉಪಯೋಗವಾಯಿತು. ಚಿಕ್ಕಮಗಳೂರು, ತರೀಕೆರೆ, ಕಡೂರು, ಕೊಪ್ಪಮಗ್ಗ ತಾಲ್ಲೂಕಿನವರಿಗೆ ನಫೆಡ್‌ಗೆ ಕೊಬ್ಬರಿ ಕೊಡಲು ಅವಕಾಶವಾಗಲಿಲ್ಲ. ಅಲ್ಲಿಯ ವರ್ತಕರು ರೈತರ ಹತ್ತಿರ ಕೊಬ್ಬರಿ ಕೊಂಡು ನಫೆಡ್‌ಗೆ ಕೊಟ್ಟರೇ ಹೊರತು ನಿಜವಾಗಿ ರೈತರು ನಫೆಡ್‌ಗೆ ಕೊಡಲು ಸಾಧ್ಯವಾಗಲಿಲ್ಲ.

(ಈ ಹಂತದಲ್ಲಿ ಶ್ರೀ ಎ.ಎಸ್.ಗುರುಸ್ವಾಮಿಯವರು ಪೀಠವನ್ನಲಂಕರಿಸಿದರು)

ಇದನ್ನೇನಾದರೂ ಸರ್ಕಾರ ಯೋಚಿಸಿದೆಯೇ? ಗಮನಸಿದೆಯೇ? ನಮ್ಮಲ್ಲೆಷ್ಟು ಕೊಬ್ಬರಿ ಉತ್ಪತ್ತಿಯಾಗುತ್ತದೆ? ಈಗ ನಾವೆಷ್ಟು ಮಾರ್ಕೆಟ್‌ನಿಂದ ಕೊಬ್ಬರಿ ತೆಗೆದುಕೊಂಡಿದ್ದೇವೆ? ಉಳಿದ ಕೊಬ್ಬರಿಯನ್ನು ನಾವು ಯಾವ ರೀತಿ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಸರ್ಕಾರ ಪ್ರಯತ್ನ ಮಾಡಿಲ್ಲ. ಒಂದು ನಿಂಬೆ ಹಣ್ಣಿನ ಬೆಲೆ ಒಂದೂವರೆ ರೂಪಾಯಿ, ಮೂಸಂಬಿ ಹಣ್ಣಿನ ಬೆಲೆ ಐದು ರೂಪಾಯಿ. ಆದರೆ, ತೆಂಗಿನ ಬೆಳೆಗಾರರು ಬೆಳೆಯುವ ತೆಂಗಿನ ಕಾಯಿ ಬೆಲೆ ಒಂದೂವರೆ, ಒಂದೂ ಮುಕ್ಕಾಲು ರೂಪಾಯಿ ಎಂದು ಹೇಳಿದರೆ ನಮ್ಮ ಕಣ್ಣಲ್ಲಿ ನೀರು ಬಂದಿಲ್ಲ, ರಕ್ತ ಬರುತ್ತಿದೆ. ನಮ್ಮ ತಾಲ್ಲೂಕಿನಲ್ಲಿ ಒಂದು ಕಡೆ ನುಸಿರೋಗ, ಒಂದು ಕಡೆ ಕಪ್ಪು ತಲೆ ಹುಳ, ಒಂದು ಕಡೆ ಸ್ಪೆಮ್ ಬ್ಲೀಡಿಂಗ್, ನುಸಿ ರೋಗ ಬಂದರೆ ತೆಂಗಿನ ಮರ ಬದುಕುತ್ತದೆ, ಕಪ್ಪುತಲೆ ಹುಳ ಬಂದರೆ ಬದುಕುತ್ತದೆ, ಆದರೆ ಸ್ಪೆಮ್ ಬ್ಲೀಡಿಂಗ್ ಆದರೆ ತೆಂಗಿನ ಮರವನ್ನು ನಾವು ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕಳೆದ ವರ್ಷ ಒಂದು ತೆಂಗಿನ ಮರ ಹೋದರೆ ಅದನ್ನು ಭರಿಸಲಿಕ್ಕೆ ನಮ್ಮ ತೋಟಗಾರಿಕೆ ಸಚಿವರು 200 ರೂಪಾಯಿಗಳನ್ನು ಕೊಟ್ಟರು, ಇದು ಸಾಕಾಗಲಿಲ್ಲ. ಇವತ್ತು ರೈತನಿಗೆ ಏನು ಅನ್ನಿಸಿದೆ ಎಂದರೆ, ತೆಂಗನ್ನು ನಾನು ಬೆಳೆಯುವುದೇ ಬೇಡ, ಇದರಿಂದ ನನಗೇನು ಉಪಯೋಗ ಎನ್ನುವಂಥ ಭಾವನೆ ಈ ರಾಜ್ಯದ ರೈತನಿಗೆ ಬಂದಿದೆ. ಸರ್ಕಾರ ಈ ಬಗ್ಗೆ ತೀಕ್ಷ್ಣವಾದ ಕ್ರಮವನ್ನು ಕೈಗೊಳ್ಳಬೇಕಾಗಿತ್ತು. ಮಾನ್ಯ ಅಲ್ಲಂ ವೀರಭದ್ರಪ್ಪನವರು ನಮ್ಮ ಜಿಲ್ಲೆಗೆ 62 ಲಕ್ಷ ರೂಪಾಯಿಗಳನ್ನು ಫೆಬ್ರವರಿಯಲ್ಲಿ ಕೊಟ್ಟರೂ ಅದನ್ನು ಇಲ್ಲಿಯವರೆಗೆ ಖರ್ಚು ಮಾಡಿಲ್ಲ, ಹೀಗಿರುವಾಗ ಅಧಿಕಾರಿಗಳ ಮೇಲೆ ನೀವು ಏನು ಕ್ರಮ ತೆಗೆದುಕೊಂಡಿರಿ? ನಾನು ಮಾನ್ಯ ಸಚಿವರಿಗೆ, ನೀವು ಸಬ್ಸಿಡಿ ಕೊಡುವುದರಿಂದ ಈ ನುಸಿರೋಗವನ್ನು ಹೊಡೆದೋಡಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದೆ. ಏಕೆಂದರೆ, 10 ಜನ ರೈತರು ಔಷಧ ಸಿಂಪಡಿಸಿದರೆ ಒಬ್ಬ ರೈತ ಸಿಂಪಡಿಸಿಲ್ಲವೆಂದರೂ ಈ ರೋಗ ಎಲ್ಲಾ ಕಡೆ ಹರಡುತ್ತದೆ. ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಈಗಾಗಲೇ ಒಂದು ಪ್ರಯೋಗ ಮಾಡಿದ್ದಾರೆ. ಏನೆಂದರೆ, ಒಂದು ಮರಕ್ಕೆ 15 ರೂಪಾಯಿಗಳ ವೆಚ್ಚದಲ್ಲಿ ಮನೊಪ್ರೋಟೋಫಾಸ್ ಎನ್ನುವ ಎನರ್ಜಿ ಪೌಡರ್ ಇರುವ ಇದು 50 ಗ್ರಾಂ ಇದ್ದು ಇದನ್ನು ಮರಕ್ಕೆ ಹಾಕಬೇಕು ಎನ್ನುವ ಪ್ರಯೋಗ ಮಾಡಿದ್ದಾರೆ, ಆದರೆ ಅವರು ಏನು ಹೇಳುತ್ತಾರೆಂದರೆ, ಒಂದೇ ಸಾರಿ ಇದನ್ನು ಉಪಯೋಗಿಸುವುದರಿಂದ ಈ ರೋಗ ಹೋಗುವುದಿಲ್ಲ, ಅದರ ಬದಲಾಗಿ ಇದನ್ನು ಪುನಃ ಆರು ತಿಂಗಳ ನಂತರ ಉಪಯೋಗಿಸಬೇಕು ಎನ್ನುವ ವಿಚಾರವನ್ನು ಜಿಲ್ಲಾ ಉಸ್ತುವಾರಿ ಸಚಿವರ ಹತ್ತಿರ ಹೇಳಿದ್ದಾರೆ. ತಾವೂ ಕೂಡ ಗಾಂಧೀಜಿಯವರ ಸಿದ್ಧಾಂತವನ್ನು ಒಪ್ಪಿಕೊಂಡವರು, ಮದ್ಯಪಾನವನ್ನು ನೀವು ನಿಷೇಧಿಸಿದ್ದರೆ, ನೀರಾ ಇಳಿಸಿ, ಸೇಂದಿ ತನ್ನಿ ಎಂದು ಹೇಳುತ್ತಿರಲಿಲ್ಲ. ರಾಜ್ಯ ಸರ್ಕಾರಕ್ಕೆ ಸುಮಾರು 945 ಕೋಟಿ ರೂಪಾಯಿಗಳ ಆದಾಯ ಬರುತ್ತದೆ ಎನ್ನುವ ಒಂದೇ ಒಂದು ದೃಷ್ಟಿಯಿಂದ, ಇವತ್ತು ನೀವು ನೀರಾ, 9 ಗಂಟೆ ಆದಮೇಲೆ ಸೇಂದಿ, ನಿಮ್ಮ ಸಾರಾಯಿ ಏನು ಇದೆ ಅದಕ್ಕಿಂತಲೂ ಇದು ಒಳ್ಳೆಯದು. ಇದರಲ್ಲಿ 'ಸಿ' ಮತ್ತು 'ಡಿ' ಅನ್ನಾಂಗ ಇದೆ, ಇದು ಲಿವರ್‌ಗೆ ಒಳ್ಳೆಯ ಪೌಷ್ಟಿಕಾಂಶ ಕೊಡುತ್ತದೆ ಎನ್ನುವ ಮಾತನ್ನು ವೈದ್ಯರು ಹೇಳಿದರು. ನಮ್ಮ ಮಾನ್ಯ ಹನುಮೇಗೌಡರವರಿಗೆ ರೈತರ ಬಗ್ಗೆ ಒಳ್ಳೆಯ ಚಿಂತನೆ, ಕಳಕಳಿ ಇದೆ, ಅದೇನೋ

ಪಾಪಿಪಾಪಿಗಳು ಎಂದು ಹೇಳುತ್ತಾರೆ, ಶ್ರೀಮಂತರು ಸಾರಾಯಿ ಕುಡಿಯುತ್ತಾರೆಯೇ? ಶ್ರೀಮಂತರು ಈ ದೇಶದ್ದು ಕುಡಿಯುವುದಿಲ್ಲ, ಎಲ್ಲಾ ಅಮೇರಿಕಾ ದೇಶದ್ದು ಕುಡಿಯುತ್ತಾರೆ. ಆದ್ದರಿಂದ, ಮಾನ್ಯ ಹನುಮೇಗೌಡರು ಆ ವಿಚಾರವನ್ನು ಅವರ ಮನಸ್ಸಿನಿಂದ ದೂರ ಮಾಡಬೇಕು. ನೀರಾ ಇಳಿಸಬೇಕಾದರೆ ತೆಂಗಿನ ಗರಿಗೆ ಈ ನುಸಿ ತಗುಲುವುದಿಲ್ಲ, ಅದು ತಗಲುವುದು ಒಂದೂವರೆ ತಿಂಗಳಿನ ಎಳೆಯ ಬಡ್ಡಿಂಗ್‌ಗೆ ಮಾತ್ರ. ಆ ಬಡ್ಡಿಂಗ್ ಬಲಿತಾದ ಮೇಲೆ ನುಸಿರೋಗದ ಪರಿಣಾಮ ಬೀರುವುದಿಲ್ಲ, ಈ ವಿಚಾರ ಏಕೆ ಹೇಳಿದೆನೆಂದರೆ, ಇದರಿಂದಾಗಿ ಮನುಷ್ಯನ ಆರೋಗ್ಯದ ಮೇಲೆ ಯಾವುದೇ ದುಷ್ಪರಿಣಾಮ ಬೀರುವುದಿಲ್ಲ. ತಮಿಳುನಾಡಿನಲ್ಲಿ ತೋಟಗಾರಿಕೆ ಸಚಿವರು, ಕೃಷಿ ಸಚಿವರು ನೀರಾ ಕುಡಿದಿದ್ದಾರೆ. ಆ ನೀರಾ ಕುಡಿದ ಮೇಲೆ 9-10 ಗಂಟೆಯವರೆಗೆ ತಿಂಡಿ ಬೇಕೆನಿಸಲಿಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ: ನಾನು ಕುಡಿದಿಲ್ಲ.

(ಗೊಂದಲ)

ಶ್ರೀ ಕೆ.ಶ್ರೀನಿವಾಸ ಗೌಡ ಕುದುವನಹಳ್ಳಿ: ಮಾನ್ಯ ಸಚಿವರು ಇಲ್ಲಿ ರೆಕಾರ್ಡ್ ಆಗುತ್ತದೆ ಎಂದು ಹೆದರಿ ಹೇಳುತ್ತಿಲ್ಲ, ಇಲ್ಲದಿದ್ದರೆ ಅವರು ಹೇಳುತ್ತಿದ್ದರು.

ಛೇರ್ಮನ್: ಮಾನ್ಯ ಕೃಷ್ಣಮೂರ್ತಿಯವರೆ, ಇಲ್ಲಿ ಬಂದಿರುವ ಪ್ರಶ್ನೆ ಏನೆಂದರೆ, ಇಲ್ಲಿ ಬಹಳಷ್ಟು ಜನ ನೀರಾ ಕುಡಿಯದೇ, ಅನುಭವ ಇಲ್ಲದೇ ಇರುವವರೇ ಮಾತನಾಡುತ್ತಿದ್ದಾರೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಬೆಳಿಗ್ಗೆ ಬಂದಿರತಕ್ಕಂಥ ನೀರಾಗೆ ಸೂರ್ಯನ ಕಿರಣದಿಂದಾಗಿ ಫರ್ಮಿಂಟೇಷನ್ ಆಗಿ ಅದರಲ್ಲಿ ಆಲ್ಕೋಹಾಲ್ ಪರ್ಸೆಂಟೇಜ್ ಆಗುತ್ತದೆ. ಇದರಿಂದಾಗಿ ಅದು ಸೇಂದಿಯಾಗುತ್ತದೆಯೇ ಹೊರತು, ಅದು ಈ ಸರ್ಕಾರ ಕೊಡುವ ಸಾರಾಯಿಗಿಂತ ಕೆಟ್ಟದ್ದಲ್ಲ. ಅದು ಆರೋಗ್ಯಕ್ಕೆ ಒಳ್ಳೆಯದು, ಇವತ್ತು ರೈತರು ಸರ್ಕಾರದ ವಿರುದ್ಧ ತಿರುಗಿ ಬಿದ್ದಿದ್ದಾರೆ, ನೀವು ರೈತರ ವಿರುದ್ಧ ಹೋಗಬೇಡಿ. ಒಂದು ಪಕ್ಷ ನೀವು ರೈತರ ವಿರುದ್ಧ ಹೋದರೆ ನಿಮ್ಮಲ್ಲಿರುವ ಯಾವುದೇ ಜೈಲ್‌ಗಳು ಸಾಕಾಗುವುದಿಲ್ಲ.

ಶ್ರೀ ಕೆ.ಹೆಚ್.ಹನುಮೇಗೌಡ: ಅದಕ್ಕೆ ಪೌಡರ್ ಹಾಕಿ ಕುಡಿಸಿ ಹಾಳು ಮಾಡುತ್ತಾರೆ, ಬಹುಶಃ ಈ ವಿಷಯ ಅವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಮಾನ್ಯ ಹನುಮೇಗೌಡರವರಿಗೆ, ಕೇವಲ ಬಡವರು ಬಡವರು, ಪಾಪಿಗಳು ಪಾಪಿಗಳು, ಎಂದು ಹೇಳುತ್ತಾರೆ, ಆದರೆ ಆ ಪಾಪಿಗಳು ಏನು ಕುಡಿಯುತ್ತಿದ್ದಾರೆ, ಅವರಿಗೆ ಏನು ಕುಡಿಸುತ್ತಿದ್ದಾರೆಂಬುದು ಅರ್ಥವಾಗಿಲ್ಲ. ಅವರು ಬೇಕಾದರೆ ಸೇಂದಿ ಕುಡಿದು ನೋಡಲಿ, ಒಂದು ವಾರದಲ್ಲಿ ಅವರಿಗೆ ಒಳ್ಳೆಯ ಬಣ್ಣ ಬರುತ್ತದೆ ಕುಡಿದಾದ ಮೇಲೆ ಅವರು ಮಾತನಾಡುವುದಿಲ್ಲ, ಪರವಾಗಿಲ್ಲ ಒಳ್ಳೆಯ ನಿದ್ದೆ ಬರುತ್ತದೆ ಎಂದು ಹೇಳಬಹುದು.

(ಗೊಂದಲ)

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಮಾನ್ಯ ಕೃಷ್ಣಮೂರ್ತಿಯವರು ನೀರಾ ಬಹಳ ಚೆನ್ನಾಗಿರುತ್ತದೆಂದು ಹೇಳುತ್ತಾರೆ, ಇದರ ಬಗ್ಗೆ ತಮ್ಮ ಅಭಿಪ್ರಾಯವೇನು?

ಛೇರ್ಮನ್: ನೀರಾದ ಬಗ್ಗೆ ಹೇಳುವುದಾದರೆ ನಾನಂತೂ ರುಚಿ ನೋಡಿಲ್ಲ. ನೀವು ಎಲ್ಲಾ ಹೇಳಿದ ಮೇಲೆ ರುಚಿ ನೋಡಬೇಕಷ್ಟೆ.

ಶ್ರೀ ಡಿ.ಪಿ.ಸದಾನಂದಗೌಡ: ಮಾನ್ಯ ಸದಸ್ಯರು ನೀರಾ ಕುಡಿದರೆ ಒಂದು ವಾರದಲ್ಲಿ ಬಣ್ಣ ಬರುತ್ತದೆ ಎಂದು ಹೇಳಿದರು, ಬಹುಶಃ ಅವರೇನಾದರೂ ಮಾನ್ಯ ಮುದ್ದಹನುಮೇಗೌಡರವರನ್ನು ನೋಡಿ ಹೇಳಿದರೇನು ಎನ್ನುವ ಸಂಶಯ ಬರುತ್ತಿದೆ.

ಛೇರ್ಮನ್: ಇದಕ್ಕೆ ಏನಾದರೂ ಸೈಂಟಿಫಿಕ್ ಥಿಯರಿಗಳೇನಾದರೂ ಬಂದಿವೆಯೇ?

ಶ್ರೀ ಕೆ.ಎಂ.ಕೃಷ್ಣಮೂರ್ತಿ: ವಾಸ್ತವವಾಗಿ ಮಾನ್ಯ ಮುದ್ದಹನುಮೇಗೌಡರವರು ಮುದ್ದುಮುದ್ದಾಗಿ ಇರುವುದನ್ನು ನೋಡಿದರೆ, ಹಿಂದೆ ನೀರಾ ಕುಡಿದು ಮುದ್ದಾಗಿದ್ದಾರೇನೋ ಗೊತ್ತಾಗುತ್ತಿಲ್ಲ. ನಮ್ಮಲ್ಲಿ ಬಹಳ ರೂಪವಂತ ಶಾಸಕರೆಂದರೆ ಅವರೇ, ಹೀಗಾಗಿ ಅವರ ತಂದೆಯವರು ನೋಡಿಯೇ ಅವರಿಗೆ ಈ ಹೆಸರನ್ನಿಟ್ಟಿರಬಹುದು.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಮುದ್ದಾಗಿರಬೇಕಾದರೆ ನೀರಾ ಕುಡಿಯಬೇಕಾಗಿಲ್ಲ, ರಾಗಿ ಮುದ್ದೆ ತಿನ್ನಬೇಕು.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ರಾಗಿ ಮುದ್ದೆ ತಿಂದರೆ ನಮ್ಮ ದೇವೇಗೌಡರ ತರಹ ಆಗುತ್ತಾರೆ. ನಿಮ್ಮ ತರಹ ಆಗುವುದಿಲ್ಲ. ಇದು ಸುಳ್ಳು.

ಛೇರ್ಮನ್: ಹಾಗಾದರೆ ಕಪ್ಪಾಗಿರುವ ಜನರಿಗೆ ನೀರಾ ಕುಡಿದರೆ ಬೆಳ್ಳಗಾಗುತ್ತಾರೆಂಬ ಅಡ್ವರ್‌ಟೈಸ್‌ಮೆಂಟ್ ಹಾಕೋಣವೇ?

ಶ್ರೀ ಕೆ.ಎಂ.ಕೃಷ್ಣಮೂರ್ತಿ: ತೆಂಗಿನ ಬೆಳೆ ವಿಫಲವಾಗಿದ್ದು, ಮೂರು ರೋಗಗಳು ನಮ್ಮನ್ನು ಕಾಡುತ್ತಿವೆ, ನಾವು ಉಳಿಸಿಕೊಂಡಿರುವ ಬೆಳೆಗೆ, ಪಕ್ಷಿಗಳ ಕಾಟ, ಮಂಗಗಳ ಕಾಟ ಇವುಗಳಿಂದ ಉಳಿಸಿಕೊಂಡು ಮಾರುಕಟ್ಟೆಗೆ ಹೋದರೆ, ಅಲ್ಲಿ ಮಂಗನಿಂದ ಮಾನವನಾಗಿರುವವನ ಕಾಟ.

ಛೇರ್ಮನ್: ಮಾನ್ಯ ಕೃಷ್ಣಮೂರ್ತಿಯವರೆ, ಎಲ್ಲರೂ ಮಾತನಾಡಿದ್ದಾರೆ, ಏನಾದರೂ ಮಹತ್ವದ ವಿಚಾರಗಳು ಇದ್ದರೆ, ಹೊಸ ಅಂಶವನ್ನು ಹೇಳಿ. ಏನಾದರೂ ಇಂಡಸ್ಟ್ರಿಯಲ್ ಯೂಸ್ ಇದೆಯೇ? ಅಥವಾ ಮೆಡಿಸಿನಲ್ ವ್ಯಾಲ್ಯೂ ಇದೆಯೇ, ಆ ಅಂಶವನ್ನು ಒತ್ತಿ ಹೇಳಿ. ಏಕೆಂದರೆ, ಇನ್ನು ಅನೇಕ ಸದಸ್ಯರು ಮಾತನಾಡಬೇಕಾಗಿದೆ ಬೇಗ ಮುಗಿಸಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ರೈತನಿಗೆ ನೀರಾ ಇಳಿಸಬೇಕು ಎನ್ನುವ ಮನೋಭಾವ ಏಕೆ ಬಂದಿದೆ? ಆ ಚಿಂತನೆ ಏಕೆ ಬಂದಿದೆ? ಏಕೆಂದರೆ, ಇವತ್ತು ಅವನು ಆರ್ಥಿಕವಾಗಿ ದುರ್ಬಲನಾಗಿದ್ದಾನೆ. ಅವನು 11 ತಿಂಗಳು ಕೊಬ್ಬರಿ ಇಟ್ಟುಕೊಂಡು ಮಾರುಕಟ್ಟೆಗೆ ಹೋದರೆ, ಅಲ್ಲಿ 2250 ರೂಪಾಯಿ ಇದೆ. ಅರಸೀಕೆರೆಯಲ್ಲಿ ನ್ಯಾಫೆಡ್‌ನವರು ರೈತರ ಕೊಬ್ಬರಿ ತೆಗೆದುಕೊಳ್ಳಲಿಲ್ಲ, ವರ್ತಕರು ರೈತರಿಂದ 220 ರೂಪಾಯಿಗೆ ತೆಗೆದುಕೊಂಡು, ಮೂರೂವರೆ ಸಾವಿರ ರೂಪಾಯಿಗೆ ಮಾರಾಟ ಮಾಡಿದರು. ಸರ್ಕಾರ ಇದನ್ನು ಗಮನಿಸಿಲ್ಲ. ಇವತ್ತಿನ ದಿವಸ ತುಮಕೂರು, ಅರಸೀಕೆರೆ ಹಾಗೂ ಕಡೂರು ಮತ್ತು ನಮ್ಮ ರಾಜ್ಯದಲ್ಲಿ ತೆಂಗು ಬೆಳೆಯತಕ್ಕಂಥ ಕೆಲವು ಭಾಗಗಳಲ್ಲಿ ಉತ್ಪಾದನೆ ಆಗತಕ್ಕಂಥ ಕೊಬ್ಬರಿ ಅಥವಾ ತೆಂಗಿನ ಕಾಯಿಯನ್ನು ನೆಫೆಡ್ ಸಂಸ್ಥೆಯವರು ತೆಗೆದುಕೊಂಡರೆ ನಾವು ನೀರಾ ಇಳಿಸತಕ್ಕಂಥ ಕೆಲಸವನ್ನು ಮಾಡುವುದಿಲ್ಲ. ಕೆಲವು ತಾಂತ್ರಿಕ ವಿಷಯಗಳನ್ನು ಇಲ್ಲಿ ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಸೇಂದಿ ಇಳಿಸುವಾಗ ತೆಂಗಿನ ಗರಿಯನ್ನು ಕಟ್ ಮಾಡುತ್ತೇವೆ. ಹಾಗೆಯೇ 12 ಹೊಂಬಾಳೆಯನ್ನು ಸಹ ಕಟ್ ಮಾಡುತ್ತೇವೆ. ಇದರಲ್ಲಿ ಒಂದು ಹೊಂಬಾಳೆಯಲ್ಲಿ ಅರ್ಧ ಭಾಗವನ್ನು ಬಿಟ್ಟು ಮಾನೋಕಾಟ್ ಮತ್ತು ಡೈಕಾಟ್ ಸ್ಪೆಮ್ ಏನಿದೆ ಅದರ ಮುಖಾಂತರ ಸೇಂದಿಯನ್ನು ಎಕ್ಸ್‌ಟ್ರಾಕ್ಟ್ ಮಾಡುತ್ತೇವೆ. ಇದರಿಂದ ತೆಂಗಿನ ಮರಗಳೂ ಕೂಡ ಹಾಳಾಗುವುದಿಲ್ಲ. ನೀರಾ ಇಳಿಸುವುದರಿಂದ ಮರಗಳ ಮೇಲೆ ಏನಾದರೂ ದುಷ್ಪರಿಣಾಮ ಆಗುತ್ತದೆಯೇ ಎಂದು ನಾನು ರೈತರನ್ನು ಕೇಳಿದ್ದೇನೆ. ಸೇಂದಿ ಇಳಿಸತಕ್ಕಂಥ ಮರಗಳಿಗೆ ಎರಡು ವರ್ಷಗಳವರೆಗೆ ಸರಿಯಾಗಿ ಪೋಷಣೆ ಮಾಡಿದರೆ ಯಥೇಚ್ಛವಾದಂಥ ಫಸಲು ಬರುತ್ತದೆ ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ನಮ್ಮ ರಾಜ್ಯದಲ್ಲಿ ಯಾವುದಾದರೊಂದು ತಾಲ್ಲೂಕನ್ನು ಪೈಲೆಟ್ ತಾಲ್ಲೂಕ್ ಆಗಿ ಮಾಡಿ ನೀರಾ ಇಳಿಸತಕ್ಕಂಥ ಕಾರ್ಯವನ್ನು ಕೈಗೊಳ್ಳಬೇಕು. ಅಬ್ಕಾರಿ ಲಾಬಿಗೆ ಹೆದರಿಕೊಂಡು ಇದನ್ನು ನೀವು ಕೈಬಿಟ್ಟರೆ ರೈತರು ಇದರ ಬಗ್ಗೆ ಹೋರಾಟ ಮಾಡುತ್ತಾರೆ. ಹಾಗೆಯೇ ರಾಜ್ಯದಲ್ಲೆಲ್ಲಾ ಅಜಾಗರೂಕತೆ ಉಂಟಾಗಬಹುದು. ಇವತ್ತಿನ ದಿವಸ ರೈತರು ಏನಾದರೂ ಹೋರಾಟ ಮಾಡಿದರೆ, ನಿಮ್ಮ ಪೋಲೀಸ್‌ನವರಾಗಲಿ ಅಥವಾ ಅಬ್ಕಾರಿಯವರಾಗಲಿ ಇವರನ್ನು ತಡೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮಾನ್ಯ ಕೃಷಿ ಸಚಿವರಲ್ಲಿ ಮತ್ತು ಮಾನ್ಯ ತೋಟಗಾರಿಕೆ ಸಚಿವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಇವತ್ತಿನ ದಿವಸ ಔಷಧಿ ಸಿಂಪಡಣೆ ಮಾಡುವುದರಿಂದ ಪರಿಸರ ಹಾಳಾಗುತ್ತದೆಯೇ ಹೊರತು ರೋಗ ಕಡಿಮೆ ಆಗುವುದಿಲ್ಲ. ಇವತ್ತಿನ ದಿವಸ ಹೆಚ್ಚಾಗಿ ಮರಗಳಿಗೆ ಪೆಸ್ಟಿಸೈಡ್ ಔಷಧಿಯನ್ನು ಹೊಡೆಯುತ್ತಿರುವುದರಿಂದ ನಮ್ಮಲ್ಲಿ ಒಂದೇ ಒಂದು ಗುಬ್ಬಚ್ಚಿ ಕೂಡ ಇಲ್ಲ. ಹಿಂದಿನ ಕಾಲದಲ್ಲಿ ಮನೆ ಮುಂದೆ ಅಕ್ಕಿಯನ್ನು ಒಣಗಿ ಹಾಕಿದಂಥ ಸಂದರ್ಭದಲ್ಲಿ ಇದನ್ನು ನೋಡಿಕೊಳ್ಳಲು ಒಂದು ಆಜ್ಜಿಯನ್ನು ಅಲ್ಲಿ ಕೂರಿಸಬೇಕಾಗಿತ್ತು. ಆದರೆ ಇವತ್ತಿನ ದಿವಸ ಈ ಒಂದು ಬಾಧೆ ಇಲ್ಲ. ಇವತ್ತಿನ ದಿವಸ ನೀವು ಪರಿಸರವನ್ನು ಹಾಳು ಮಾಡಿದ್ದೀರಿ. ಆದ್ದರಿಂದ ಮಾನ್ಯ ಕೃಷಿ ಸಚಿವರು ಮತ್ತು ಮಾನ್ಯ ತೋಟಗಾರಿಕೆ ಸಚಿವರು ಒಂದು ಸಾರಿ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ತೆಂಗನ್ನು ಬೆಳೆಯಲಾಗುತ್ತಿದೆ ಅಂಥ ಕಡೆ ಪ್ರವಾಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಹಾಗೆಯೇ ನೀರಾ ಇಳಿಸುವುದಕ್ಕೆ ಸರ್ಕಾರ ಅನುಮತಿ ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.